ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಏಷ್ಯನ್ ಕ್ರೀಡಾಕೂಟದ ವೇಟ್‌ಲಿಫ್ಟಿಂಗ್ ಸ್ಪರ್ಧೆಯಲ್ಲಿ ಮಹಿಳೆಯರ 49 ಕೆಜಿ ವಿಭಾಗದಲ್ಲಿ ಭಾರತದ ಮೀರಾಬಾಯಿ ಚಾನು ಅವರು ಬೆಳ್ಳಿ ಪದಕ ಗೆದ್ದಿದ್ದಾರೆ. ಆ ಮೂಲಕ 12 ವರ್ಷಗಳ ಸುದೀರ್ಘ ಕಾಯುವಿಕೆಗೆ ಅಂತ್ಯ ಹಾಡಿದ್ದಾರೆ.

24 ಸೆಪ್ಟೆಂಬರ್, 2026 ಗುರುವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ -193 ಪುಟ-4 ಹಾಸನ E-mail : prajodayahsn@gmail.com RNI NO: KARKAN/2007/22629



ಅನ್‌ಸಂಗ್ ರಷ್ಯಾ : ಜಗತ್ತಿಗೆ ಕಾಣದ ಯಶೋಗಾಥೆ » 2



ಸಕಲೇಶಪುರ : ಶೇ.54ಕ್ಕೂ ಅಧಿಕ ನೋಟೀಸ್ ವಿಚಾರಣೆ ಪೂರ್ಣ » 3



ಪದ ವ್ಯತ್ಯಾಸ : ದೊಡ್ಡ ಸಮಸ್ಯೆಯಾಗಿ ಬಿಂಬಿಸದಿರಿ » 4

# ಬರ : ಸರ್ಕಾರದ ವಿರುದ್ಧ ಮುಗಿಬಿದ್ದ ವಿಪಕ್ಷ

## ಸಾಲಮನ್ನಾ, ಹೆಕ್ಟೇರ್‌ಗೆ 50 ಸಾವಿರ ರೂ. ಪರಿಹಾರಕ್ಕೆ ಆಗ್ರಹ | ಬರ ಪರಿಸ್ಥಿತಿ ತೀರ್ಮಾನಿಸುವುದು ಕೇಂದ್ರ: ಸಿಎಂ

• ಪ್ರಜೋದಯ ವರದಿ

**ಬೆಂಗಳೂರು:** ರೈತರ ಆತ್ಮಹತ್ಯೆ ತಡೆಗೆ ಸರ್ಕಾರ ಕ್ರಮ ಕೈಗೊಳ್ಳಬೇಕು. 5 ಲ.ರೂ.ವರೆಗೂ ಸಾಲಮನ್ನಾ ಮಾಡಬೇಕು ಹಾಗು ಪ್ರತಿ ಹೆಕ್ಟೇರ್‌ಗೆ 50 ಸಾವಿರ ರೂ. ಪರಿಹಾರ ನೀಡಬೇಕೆಂದು ಪ್ರತಿಪಕ್ಷಗಳು ಸರ್ಕಾರವನ್ನು ಒತ್ತಾಯಿಸಿವೆ.

ವಿಧಾನಸಭೆಯಲ್ಲಿ ಬುಧವಾರ ನಡೆದ ಬರದ ಕುರಿತಾದ ಚರ್ಚೆಯಲ್ಲಿ ಬಿಜೆಪಿ ಸದಸ್ಯ ಬಿ.ವೈ.ವಿಜಯೇಂದ್ರ ಅವರು ಮಾತನಾಡಿ, ರೈತರ ಬಳಿ ಸಚಿವರು ಹಾಗು ಅಧಿಕಾರಿಗಳು ಹೋಗಿ ಸಮಸ್ಯೆಗಳನ್ನು ಕೇಳಬೇಕು. ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸುವ ಮೂಲಕ ಕೆರೆಗಳನ್ನು ಪುನಶ್ಚೇತನ ಗೊಳಿಸಬೇಕೆಂದು ಆಗ್ರಹಿಸಿದರು.

ಮುಖ್ಯಮಂತ್ರಿ ತಮ್ಮನ್ನು ರಾಜ್ಯದ ದೊರೆ ಎಂದು ಕರೆಯಬೇಡಿ, ನಾಡಿನ ಸೇವಕನೆಂದು ಕರೆಯಿರಿ ಎಂದು ಹೇಳಿರುವುದು ಸಂತೋಷ. ರೈತರ ಅಭಿವೃದ್ಧಿ ಆಗಬೇಕು. ಬೆಂಗಳೂರು ಅಭಿವೃದ್ಧಿಯಾದರೆ ಕರ್ನಾಟಕ ಅಭಿವೃದ್ಧಿ ಆಗುತ್ತೆ ಎನ್ನುವ ಭಾವನೆ ಯಲ್ಲಿ ಇದೆ ಅನಿಸುತ್ತೆ. ಬೆಂಗಳೂರು ಜೊತೆಗೆ



ಉತ್ತರಕರ್ನಾಟಕ ಸೇರಿ ರಾಜ್ಯದ ಸರ್ವತೋಮುಖ ಅಭಿ ವೃದ್ಧಿಗೆ ಸರ್ಕಾರ ಗಮನ ಕೊಡಬೇಕೆಂದರು.

ಶಾಸಕ ಎಂ.ಟಿ.ಕೃಷ್ಣಪ್ಪ ಅವರು ಮಾತನಾಡಿ, ರೈತರ ಸಂಪೂರ್ಣ ಸಾಲವನ್ನು ಸರ್ಕಾರ ಮನ್ನಾ ಮಾಡಬೇಕು. ಈ ಹಿಂದೆ ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದಾಗ 2 ಲ.ರೂ. ಸಾಲಮನ್ನಾ ಮಾಡಿದ್ದರು. ಈಗ ಮುಖ್ಯಮಂತ್ರಿ ಅವರು ಸಂಪೂರ್ಣ ಸಾಲಮನ್ನಾ ಮಾಡಬೇಕೆಂಬುದು ನಮ್ಮ ಬೇಡಿಕೆ. ಸರ್ಕಾರ ರೈತರ ಪರ ಕಾಳಜಿ ವಹಿಸಬೇಕೆಂದು ಹೇಳಿದರು.

**ಮಾನದಂಡ ಪ್ರಕಾರ ಬರ ಘೋಷಣೆ**

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮಾತನಾಡಿ, ಕಳೆದ ಅಧಿವೇಶನದಲ್ಲಿ ವಿರೋಧ ಪಕ್ಷದವರು ರಾಜಕೀಯ ಮಾಡುವುದಕ್ಕಾಗಿಯೇ ಬರದ ಬಗ್ಗೆ ಚರ್ಚಿಸಲು ಅವಕಾಶ ನೀಡಿರಲಿಲ್ಲ. ಇಂದು ಎಲ್ಲಾ ಶಾಸಕರು ಅವರವರ ಕ್ಷೇತ್ರದ ಸ್ಥಿತಿಗತಿಗಳ ಬಗ್ಗೆ ಚರ್ಚಿಸಲು ಅವಕಾಶ ನೀಡುವ ಉದ್ದೇಶದಿಂದಲೇ ಈ ಅಧಿವೇಶನ ನಡೆಸಲಾಗುತ್ತಿದೆ. ಕೇಂದ್ರ ಸರ್ಕಾರ ಬರದ ಬಗ್ಗೆ ತೀರ್ಮಾನ ಮಾಡಬೇಕಿದೆ. ನಾವು ಇಲ್ಲಿಂದ ಏನೇ ವರದಿ ಕಳುಹಿಸಿದರೂ ಅದು ತಲುಪುವುದು ಕೇಂದ್ರಕ್ಕೆ. ಬರ ಘೋಷಣೆ ಮಾಡಲು ಅದರದೇ ಆದ ಮಾನದಂಡಗಳಿವೆ ಎಂದರು.

ಈ ಮಧ್ಯೆ ಎಲ್ಲರ ಒತ್ತಡದ ಮೇರೆಗೆ ಮೋಡ ಬಿತ್ತನೆ ಪ್ರಯತ್ನಕ್ಕೂ ಮುಂದಾಗಿದ್ದೇವೆ. ಕೆಲವು ಭಾಗದಲ್ಲಿ ಯಶಸ್ವಿಯಾದರೆ, ಮತ್ತೆ ಕೆಲವು ಭಾಗದಲ್ಲಿ ಯಶಸ್ವಿಯಾಗಿಲ್ಲ. ಮೋಡಗಳು ಬಂದರೆ ನಾವು ಬಿತ್ತನೆ ಮಾಡಲು ಸಾಧ್ಯ. ಹೆಚ್.ಕೆ.ಪಾಟೀಲರಂತಹ ಹಿರಿಯ ನಾಯಕರ ಮೇಲೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಒತ್ತಡ ಇರಬೇಕಾದರೆ, ನಮ್ಮ ಯಶವಂತರಾಯಗೌಡ ಪಾಟೀಲ್ ಅವರು ಬೇಸರಗೊಂಡಿರುವುದರಲ್ಲಿ ತಪ್ಪಿಲ್ಲ ಎಂದರು.

ಬರದ ವಿಚಾರದಲ್ಲಿ ನಾವು ಪಕ್ಷಭೇದ ಮಾಡುತ್ತಿಲ್ಲ. 224 ಕ್ಷೇತ್ರಗಳು ಒಂದೇ. ಮಳೆ ಎಲ್ಲಿ ಬಿದ್ದಿಲ್ಲವೋ ಮಾನದಂಡಗಳ ಅನುಸಾರ ಬರ ಘೋಷಣೆ ಮಾಡಲಾಗಿದೆ. ನನ್ನ ಕ್ಷೇತ್ರದ ಒಂದು ಭಾಗದಲ್ಲಿ ಮಾತ್ರ ಮಳೆಯಾಗಿದೆ. ಉಳಿದ ಭಾಗದಲ್ಲಿ ಮಳೆಯಾಗಿಲ್ಲ. ಆದರೂ ನಾನು ಬರದ ಪಟ್ಟಿಗೆ ಸೇರಿಸುವಂತೆ ಒತ್ತಡ ಹಾಕಿಲ್ಲ. ಯಶವಂತರಾಯಗೌಡ ಪಾಟೀಲ್ ಭಾವನಾತ್ಮಕವಾಗಿ ರಾಜೀನಾಮೆ ಪತ್ರ ಬರೆದಿರುವುದು ನಿಜ. ಅವರು ಸಭಾಧ್ಯಕ್ಷರ ಬಳಿಗೂ ಬಂದಿದ್ದು, ನೀವು ಮುಖ್ಯಮಂತ್ರಿ ಜೊತೆ ಮಾತನಾಡಿ ಎಂದು ಸಲಹೆ ನೀಡಿದ್ದಾರೆ. ನಾನು ಅವರೊಂದಿಗೆ ಮಾತನಾಡಿ, ಸಮಾಧಾನ ಮಾಡಿ ಅವರನ್ನು ಕಳುಹಿಸಿ ಇಲ್ಲಿಗೆ ಬಂದಿರುವೆ. ಅವರಿಗೂ ಒತ್ತಡವಿದೆ. ತಮ್ಮ ಕ್ಷೇತ್ರದ ಜನರಿಗೆ ಉತ್ತರ ನೀಡ ಬೇಕಲ್ಲವೇ ಅವರು ಭಾವನಾತ್ಮಕವಾಗುವುದರಲ್ಲಿ ತಪ್ಪೇನಿಲ್ಲವೆಂದು ಹೇಳಿದರು.

### ಆರ್ಥಿಕ ಪರಿಸ್ಥಿತಿ ಕುರಿತು ಜಟಾಪಟಿ

ರಾಜ್ಯಸರ್ಕಾರದ ಆರ್ಥಿಕ ಪರಿಸ್ಥಿತಿ ಕುರಿತ ವಿಚಾರದಲ್ಲಿ ಆಡಳಿತಾರೂಢ ಕಾಂಗ್ರೆಸ್ ಹಾಗು ಬಿಜೆಪಿ ಶಾಸಕರ ನಡುವೆ ಜಟಾಪಟಿ ನಡೆಯಿತು. ವಿಪಕ್ಷ ನಾಯಕ ಆರ್. ಅಶೋಕ್ ಅವರು ಮಾತನಾಡಿ, ಹಣಕಾಸು ಇಲಾಖೆ ಬರೆದಿರುವ ಪತ್ರ ಗೊತ್ತಿಲ್ಲವೇ. ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗಿ ಬಂದಾಗ ದಿವಾಳಿಯಾಗಿದೆ ಎಂಬ ಪತ್ರ ಹೊರಬಂದಿದೆ. ಹಾಗಿದ್ದರೆ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗಿದ್ದಾಗ ಸರ್ಕಾರವನ್ನು ಪಾಪರ್ ಮಾಡಿ ಬಿಟ್ಟುಹೋಗಿದ್ದರೇ ಎಂದು ಪ್ರಶ್ನಿಸಿದರು. ಈ ಹಂತದಲ್ಲಿ ಮತ್ತೆ ಮಾತಿನ ಚಕಮಕಿ ನಡೆಯಿತು. ಆಡಳಿತ ಪಕ್ಷದ ಶಾಸಕರು ಕೇಂದ್ರ ಸರ್ಕಾರದಿಂದ ಮೊದಲು ಅನುದಾನ ಬಿಡುಗಡೆ ಮಾಡಿಸಿ ಎಂದು ಛೇಡಿಸಿದರು.

### ಕಾಂಗ್ರೆಸ್ ಶಾಸಕ ರಾಜೀನಾಮೆ

ಇಂಡಿ ಹಾಗು ಚಡಚಣ ತಾಲ್ಲೂಕನ್ನು ಬರ ಪೀಡಿತ ತಾಲ್ಲೂಕುಗಳ ಪಟ್ಟಿಗೆ ಸೇರಿಸಿಲ್ಲವೆಂದು ಆರೋಪಿಸಿ ಶಾಸಕ ಸ್ಥಾನಕ್ಕೆ ಯಶವಂತರಾಯ ಗೌಡ ಪಾಟೀಲ್ ಅವರು ರಾಜೀನಾಮೆ ಸಲ್ಲಿಸಿದ್ದಾರೆ.

ಸ್ಪೀಕರ್ ಜೆ.ಎಸ್.ಪಾಟೀಲ್ ಅವರಿಗೆ ಬುಧವಾರ ರಾಜೀನಾಮೆ ಪತ್ರ ನೀಡಿದ್ದಾರೆ. ಅದರಿಂದ ತೀವ್ರ ಮುಜುಗರಕ್ಕೀಡಾಗಿರುವ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಶಾಸಕರ ಮನವೊಲಿಕೆ ಪ್ರಯತ್ನಕ್ಕೆ ಮುಂದಾಗಿದ್ದಾರೆ. ಈ ವೇಳೆ ಉದ್ದೇಶಪೂರ್ವಕವಾಗಿ ಕ್ಷೇತ್ರವನ್ನು ಕೈಬಿಡಲಾಗಿದೆ ಎಂದು ಶಾಸಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆಂದು ತಿಳಿದುಬಂದಿದೆ.

ಇಂಡಿ ತಾಲ್ಲೂಕು 2026-27ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ತೀವ್ರ ಬರಗಾಲಕ್ಕೆ ತುತ್ತಾಗಿದೆ. ಆರಂಭದಲ್ಲಿ ಸ್ವಲ್ಪ ಮಳೆ ಬಿದ್ದ ಪ್ರಯುಕ್ತ ರೈತರು ಸಾಲ ಮಾಡಿ ಬೀಜ, ಗೊಬ್ಬರಗಳನ್ನು ಖರೀದಿಸಿ, ಬಿತ್ತನೆ ಮಾಡಿದ್ದಾರೆ. ನಂತರ ಮಳೆ ಕೈಕೊಟ್ಟ ಹಿನ್ನಲೆ ಅನ್ನದಾತರ ಬದುಕು ಹದಗೆಟ್ಟಿದೆ ಎಂದು ಶಾಸಕರು ಹೇಳಿದ್ದಾರೆ.

# ಮಾವಿನಕೆರೆ ಏತ ನೀರಾವರಿ ವಿಳಂಬ: ರೇವಣ್ಣ ಅಸಮಾಧಾನ

• ಪ್ರಜೋದಯ ವರದಿ

**ಹೊಳೆನರಸೀಪುರ:** ಮಾವಿನಕೆರೆ ಏತ ನೀರಾವರಿ ಯೋಜನೆಯ ಭೂಸ್ವಾಧೀನ ಪ್ರಕ್ರಿಯೆ ವಿಳಂಬವಾಗಿರುವುದರಿಂದ ಕಾಮಗಾರಿ ನಿಗದಿತ ಕಾಲಮಿತಿಯಲ್ಲಿ ಪೂರ್ಣಗೊಳ್ಳದೆ ನಿಧಾನಗತಿಯಲ್ಲಿ ಸಾಗುತ್ತಿದೆ ಎಂದು ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಅಸಮಾಧಾನ ವ್ಯಕ್ತಪಡಿಸಿದರು.

ತಾಲ್ಲೂಕಿನ ಮಾವಿನಕೆರೆ ಏತ ನೀರಾವರಿ ಯೋಜನೆಯ ಸ್ಥಳ ಪರಿಶೀಲನೆ ನಡೆಸಿದ ಬಳಿಕ ಮಾತನಾಡಿದ ಅವರು, ನೋಂದಣಿ ಪೂರ್ಣಗೊಂಡಿದ್ದರೂ ರೈತರಿಗೆ ಇನ್ನೂ ಪರಿಹಾರದ ಹಣ ಪಾವತಿಯಾಗಿಲ್ಲ. ಇದರಿಂದ ಕಾಮಗಾರಿ ನಿಧಾನಗತಿಯಲ್ಲಿ ನಡೆಯುತ್ತಿದೆ. ಮೊದಲ ಹಂತದಲ್ಲಿ ಶುಕ್ರವಾರದೊಳಗೆ ನೀರು ಒದಗಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ತಿಳಿಸಿದರು.

333 ಕೋ.ರೂ. ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಯೋಜನೆಯ ಮೊದಲ ಹಂತದಲ್ಲಿ ತಾಲ್ಲೂಕು ಸೇರಿ ಒಟ್ಟು 45 ಕೆರೆಗಳಿಗೆ, ಎರಡನೇ ಹಂತದಲ್ಲಿ ದುದ್ದ-ಶಾಂತಿಗ್ರಾಮ ವ್ಯಾಪ್ತಿಯ 160 ಕೆರೆಗಳಿಗೆ ನೀರು ಒದಗಿಸಲು ಉದ್ದೇಶಿಸಲಾಗಿದೆ. ಮೂರನೇ ಹಂತದ ಹೊಂಗೆರೆ-ಹೊನ್ನಾವರ ಯೋಜನೆಯನ್ನು 45 ಕೋ.ರೂ. ವೆಚ್ಚದಲ್ಲಿ



ಅಭಿವೃದ್ಧಿಪಡಿಸಲಾಗುತ್ತಿದೆ. ಇದರಿಂದ 112 ಹಳ್ಳಿಗಳ ಕೆರೆಗಳನ್ನು ತುಂಬಿಸಲು ಸಾಧ್ಯವಾಗಲಿದೆ ಎಂದು ಹೇಳಿದರು.

ಒಟ್ಟಾರೆ 378 ಕೋ.ರೂ. ವೆಚ್ಚದ ಯೋಜನೆಗಳ ಮೂಲಕ 272 ಕೆರೆಗಳಿಗೆ ನೀರು ಒದಗಿಸುವ ಗುರಿ ಹೊಂದಲಾಗಿದೆ. ಮಾವಿನಕೆರೆ ಯೋಜನೆಯ ಪಂಪ್‌ಹೌಸ್‌ನಲ್ಲಿ ನಾಲ್ಕು ಮೋಟಾರ್‌ಗಳಿದ್ದು, ಮೂರು ಮೋಟಾರ್‌ಗಳು ನಿರಂತರವಾಗಿ ಕಾರ್ಯನಿರ್ವಹಿಸಲಿದ್ದು, ಒಂದು ಮೋಟಾರ್‌ನ್ನು ಸ್ಟ್ಯಾಂಡ್‌ಬೈಯಲ್ಲಿ ಇರಿಸಲಾಗುತ್ತದೆ ಎಂದು ವಿವರಿಸಿದರು. ಇದೇ ವೇಳೆ ಭೂಸ್ವಾಧೀನ ಮತ್ತು ಪರಿಹಾರ ಪಾವತಿ ಪ್ರಕ್ರಿಯೆಯನ್ನು ತ್ವರಿತಗೊಳಿಸಿ, ಯೋಜನೆಯ ಕಾಮಗಾರಿಯನ್ನು ವೇಗವಾಗಿ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಇಇ ಮಹೇಶ್ ಹಾಗು ಎಇಇ ಜಗನ್ನಾಥ್ ಉಪಸ್ಥಿತರಿದ್ದರು.

# ಯಗಚಿ ಜಲಾಶಯದಿಂದ ಕೆರೆ ತುಂಬಿಸಲು ಆಗ್ರಹಿಸಿ ಪ್ರತಿಭಟನೆ

• ಪ್ರಜೋದಯ ವರದಿ

**ಹಾಸನ:** ಯಗಚಿ ಜಲಾಶಯದಿಂದ ನಾಲಾ ವ್ಯಾಪ್ತಿಯ ಎಲ್ಲಾ ಕೆರೆಕಟ್ಟೆಗಳಿಗೆ ನೀರು ಹರಿಸಿ ಜನ, ಜಾನುವಾರು, ರೈತರ ಬೆಳೆಗಳನ್ನು ರಕ್ಷಿಸಬೇಕೆಂದು ಒತ್ತಾಯಿಸಿ ಮಾಜಿ ಸಚಿವ ಹೆಚ್.ಕೆ.ಕುಮಾರಸ್ವಾಮಿ ನೇತೃತ್ವದಲ್ಲಿ ಜೆಡಿಎಸ್ ವತಿಯಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಬುಧವಾರ ಪ್ರತಿಭಟನೆ ನಡೆಸಲಾಯಿತು.

ತಾಲ್ಲೂಕಿನ ಕಟ್ಟಾಯ ಹೋಬಳಿಯ ಯಗಚಿ ಜಲಾಶಯದ ನಾಲಾ ವ್ಯಾಪ್ತಿಯಲ್ಲಿ ಹಲವು ಗ್ರಾಮಗಳಿದ್ದು, ಮಳೆ ಕೊರತೆಯಿಂದಾಗಿ ಕೆರೆಕಟ್ಟೆಗಳು ಒಣಗಿವೆ. ಅಂತರ್ಜಲ ಮಟ್ಟವೂ ಕುಸಿದು ನೀರಿನ ಮೂಲಗಳು ಬತ್ತಿ ಹೋಗಿರುವುದರಿಂದ ರೈತರು ಬೆಳೆದ ಬೆಳೆಗಳು ಸಂಪೂರ್ಣ ಒಣಗುವ ಸ್ಥಿತಿ ನಿರ್ಮಾಣವಾಗಿದೆ. ಬಿಸಿಲಿನ ತಾಪ ಹೆಚ್ಚಾಗಿರುವ ಹಿನ್ನಲೆ ಜನರು ಹಾಗು ಜಾನುವಾರುಗಳಿಗೆ ಕುಡಿಯುವ ನೀರಿಗೂ ತೀವ್ರ ಸಮಸ್ಯೆ ಎದುರಾಗಿದೆ ಎಂದು ಪ್ರತಿಭಟನಾಕಾರರು



ದೂರಿದರು.

ಮಳೆ ಇಲ್ಲದೆ ಕೃಷಿ ಚಟುವಟಿಕೆಗಳು ಕುಂಠಿತಗೊಂಡಿದ್ದು, ಗ್ರಾಮೀಣ ಪ್ರದೇಶದಲ್ಲಿ ಬರದ ಛಾಯೆ ಆವರಿಸಿದೆ. ಹೀಗಾಗಿ ಯಗಚಿ ಜಲಾಶಯದಿಂದ ಕುಡಿಯುವ ನೀರಿನ ಉದ್ದೇಶಕ್ಕಾಗಿ ನೀರು ಹರಿಸಿ, ನಾಲಾ ವ್ಯಾಪ್ತಿಯ ಎಲ್ಲಾ ಗ್ರಾಮಗಳ ಕೆರೆಕಟ್ಟೆಗಳನ್ನು ತುಂಬಿಸಬೇಕೆಂದು ಆಗ್ರಹಿಸಿದರು.

ಅಂಕಪುರ, ಕಟ್ಟಾಯ, ಕಬ್ಬತ್ತಿ ಸೇರಿ ವಿವಿಧ ಗ್ರಾಮಗಳ ನಾಲೆಗಳಿಗೆ ಭೂಸ್ವಾಧೀನ ಮಾಡಿಕೊಂಡು ಹಲವು ವರ್ಷಗಳು ಕಳೆದಿದ್ದರೂ ಭೂಮಾಲೀಕರಿಗೆ ಇದುವರೆಗೆ ಸೂಕ್ತ ಪರಿಹಾರ ನೀಡಿಲ್ಲ. ಭೂಸ್ವಾಧೀನಗೊಂಡ ಜಮೀನುಗಳಿಗೆ ಶೀಘ್ರವೇ ನಿಯಮಾನುಸಾರ ಪರಿಹಾರ ಬಿಡುಗಡೆ ಮಾಡಬೇಕು. ಯಗಚಿ ನಾಲಾ ವ್ಯಾಪ್ತಿಯ ಗ್ರಾಮಗಳ ವಾಸ್ತವ ಸ್ಥಿತಿಯನ್ನು ಪರಿಗಣಿಸಿ ಸರ್ಕಾರ ತುರ್ತು ಕ್ರಮ ಕೈಗೊಳ್ಳಬೇಕು. ಕುಡಿಯುವ ನೀರಿನ ಸಮಸ್ಯೆ ಉಲ್ಬಣಿಸುವ ಮುನ್ನ ಜಲಾಶಯದಿಂದ ನೀರು ಹರಿಸಿ ಕೆರೆಗಳನ್ನು ತುಂಬಿಸುವ ಮೂಲಕ ಅನ್ನದಾತರು ಹಾಗು ಜಾನುವಾರುಗಳನ್ನು ರಕ್ಷಿಸಬೇಕೆಂದು ಒತ್ತಾಯಿಸಿ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದರು.

ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಎಸ್.ದ್ಯಾವೇಗೌಡ, ಜಿಲ್ಲಾ ವಕ್ತಾರ ಹೊಂಗೆರೆ ರಘು, ಮುಖಂಡರಾದ ಬಿದರಕೆರೆ ಜಯರಾಂ, ರುದ್ರಪ್ಪ, ಪಾಪಣ್ಣ ಮತ್ತಿತರರಿದ್ದರು.

# ಚಂದಾ ಎತ್ತಿ ಶಿವಲಿಂಗೇಗೌಡರ ವಿರುದ್ಧ ಬಿಜೆಪಿ ಪ್ರತಿಭಟನೆ

• ಪ್ರಜೋದಯ ವರದಿ

**ಹಾಸನ:** ಅಧಿಕಾರಿಗಳು ಕೆಲಸ ಮಾಡಿಕೊಟ್ಟ ಬಳಿಕ ಗೌರವವಯುತವಾಗಿ ಕೊಡುವುದು ಧರ್ಮವೆಂಬ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ ಅವರ ಹೇಳಿಕೆ ಖಂಡಿಸಿದ ಬಿಜೆಪಿ ಕಾರ್ಯಕರ್ತರು ರಾಜೀನಾಮೆಗೆ ಆಗ್ರಹಿಸಿ ಬುಧವಾರ ಚಂದಾ ಎತ್ತುವ ಮೂಲಕ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಆರ್.ಸಿ.ರಸ್ತೆಯಲ್ಲಿರುವ ಜಿಲ್ಲಾ ಬಿಜೆಪಿ ಕಚೇರಿಯಿಂದ ಮೆರವಣಿಗೆಯಲ್ಲಿ ಬಂದ ಪ್ರತಿಭಟನಾಕಾರರು ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ ಕುಳಿತು ಹಣ ಸಂಗ್ರಹಿಸಿದರು. ಕೆಲಸ ಮಾಡಿಕೊಟ್ಟ ಅಧಿಕಾರಿಗೆ ಲಂಚ ಕೊಡುವುದು ಧರ್ಮವೆಂದು ಸಚಿವರೇ ಹೇಳಿದ್ದಾರೆ. ಆ ಮೂಲಕ ಈ ಸರ್ಕಾರ ಲಂಚವನ್ನು ಪ್ರೋತ್ಸಾಹಿಸುತ್ತಿದೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಲಂಚ ಮುಕ್ತ ಕರ್ನಾಟಕ, ಯಾರೇ ಲಂಚ ಕೇಳಿ



ದರೂ ಕರೆ ಮಾಡಿ ಎಂದು ಹೇಳುತ್ತಾರೆ. ಆದರೆ, ಸಚಿವ ಸಂಪುಟದ ಸಹೋದ್ಯೋಗಿ ಬಹಿರಂಗವಾಗಿ ಲಂಚ ನೀಡಬೇಕೆಂದು ಕಟ್ಟಪ್ಪಣೆ ಹೊರಡಿಸುತ್ತಾರೆ. ಕಾಂಗ್ರೆಸ್ ಸರ್ಕಾರ ಭ್ರಷ್ಟಾಚಾರದ ಕೂಪವಾಗಿದೆ ಎಂಬುದಕ್ಕೆ ಶಿವಲಿಂಗೇಗೌಡರ ಹೇಳಿಕೆಯೇ ಸಾಕ್ಷಿ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ ಅವರು ಮಾತನಾಡಿ, ಸಚಿವ ಶಿವಲಿಂಗೇಗೌಡ ಅವರು ಸಕಲೇಶಪುರದಲ್ಲಿ ಇತ್ತೀಚೆಗೆ ನಡೆದ ಪ್ರಜಾ ಸೇವಾ ಆಂದೋಲನ ಸಭೆಯಲ್ಲಿ ಲಂಚ ನೀಡುವಂತೆ ಆದೇಶಿಸಿದ್ದಾರೆ. ಬರದಿಂದಾಗಿ ರೈತರು ಕಂಗಾಲಾಗಿದ್ದಾರೆ. ಕೆರೆಕಟ್ಟೆಗಳೆಲ್ಲಾ ಬರಿದಾಗಿ ಜಾನುವಾರುಗಳ ಕುಡಿಯುವ ನೀರು ಹಾಗು ಮೇವಿಗೆ ಪರದಾಡುವಂತಾಗಿದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ರೈತರ ನೆರವಿಗೆ ಬರಬೇಕಿದ್ದ ಸರ್ಕಾರ ಲಂಚ ಕೊಡಿ ಎಂದು ಹೇಳುವುದು ಎಷ್ಟರ ಮಟ್ಟಿಗೆ ಸರಿ. ಆರ್ಥಿಕ ಸಂಕಷ್ಟದ ಪರಿಸ್ಥಿತಿಯಲ್ಲೂ ಸಾರ್ವಜನಿಕರಿಂದ ಹಣ ಸಂಗ್ರಹಿಸುತ್ತಿದ್ದೇವೆ. ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ. ಶಿವಲಿಂಗೇಗೌಡ ಅವರು ಹಾಸನಕ್ಕೆ ಬಂದಾಗ ನಮ್ಮಿಂದ ಹಣ ಪಡೆಯಲಿ. ಇಷ್ಟು ಹಣ ಸಾಕಾಗದಿದ್ದರೆ ಹೇಳಲಿ ಮತ್ತೆ ಸಂಗ್ರಹಿಸಿಕೊಡುತ್ತೇವೆಂದು ತಿರುಗೇಟು ನೀಡಿದರು.

ಕಳೆದ ಮೂರು ವರ್ಷಗಳಿಂದ ರಾಜ್ಯದಲ್ಲಿ ಅಭಿವೃದ್ಧಿ ಶೂನ್ಯವಾಗಿದೆ. ಭ್ರಷ್ಟಾಚಾರ, ಸ್ವಜನಪಕ್ಷಪಾತ, ಕುರ್ಚಿಗಾಗಿ ಗುದ್ದಾಟ ಇದೇ ನಡೆಯುತ್ತಿದೆ. ವಾಲ್ಮೀಕಿ ಹಗರಣದಲ್ಲಿ ಬಿ.ನಾಗೇಂದ್ರ ಅವರು ಜೈಲು ಸೇರಬೇಕಾಯಿತು. ಪಶುವೈದ್ಯಾಧಿಕಾರಿಗಳ ನೇಮಕಾತಿಯಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರ ನಡೆದಿದೆ. ರಾಜ್ಯದಲ್ಲಿ ಕಾನೂನು ಸುವ್ಯಸ್ಥೆ ಸಂಪೂರ್ಣ ಹಾಳಾಗಿದೆ. ಇದೆಲ್ಲದರ ನಡುವೆ ಶಿವಲಿಂಗೇ ಗೌಡರು ಬಹಿರಂಗವಾಗಿ ಲಂಚದ ಹೇಳಿಕೆ ನೀಡಿದ್ದಾರೆ. ಈ ಕೂಡಲೇ ಅವರನ್ನು ಸಚಿವ ಸ್ಥಾನದಿಂದ ವಜಾ ಗೊಳಿಸಬೇಕೆಂದು ಒತ್ತಾಯಿಸಿದರು. ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಮಿತ್ ಶೆಟ್ಟಿ, ಗಿರೀಶ್, ವೇದಾವತಿ, ಆರ್.ಮೋಹನ್ ಮತ್ತಿತರರಿದ್ದರು.

# ಪುರಸಭೆ ಅಧ್ಯಕ್ಷರ ಅವಧಿ ಕಡಿತ: ತುರ್ತು ಸಭೆ

## ನ್ಯಾಯಾಲಯದ ಮೊರೆ ಹೋಗಲು ಒಮ್ಮತದ ನಿರ್ಧಾರ

• ಪ್ರಜೋದಯ ವರದಿ

**ಬೇಲೂರು:** ಪುರಸಭೆ ಅಧ್ಯಕ್ಷರ ಎರಡನೇ ಅವಧಿಯ ಮೀಸಲಾತಿ ಪ್ರಕಟವಾದ ಬಳಿಕ ಸದಸ್ಯರಿಗೆ 30 ತಿಂಗಳ ಬದಲಿಗೆ 26 ತಿಂಗಳ ಅವಧಿ ಮಾತ್ರ ದೊರೆಯುತ್ತಿದೆ. ಕಡಿತಗೊಂಡಿರುವ ನಾಲ್ಕು ತಿಂಗಳ ಅವಧಿಯನ್ನು ನ್ಯಾಯಬದ್ಧವಾಗಿ ಪಡೆಯಲು ಹೋರಾಟ ನಡೆಸುವ ಬಗ್ಗೆ ಪುರ ಸಭೆಯ ತುರ್ತು ಸಭೆಯಲ್ಲಿ ಬಹು ಮತದ ಅಭಿಪ್ರಾಯ ವ್ಯಕ್ತವಾಯಿತು.

ಪುರಸಭೆಯ ವೇಲಾಪುರಿ ಸಭಾಂ ಗಣದಲ್ಲಿ ಅಕ್ರಮ್ ಶರೀಫ್ ಅಧ್ಯಕ್ಷತೆ ಯಲ್ಲಿ ನಡೆದ ಸಭೆಯಲ್ಲಿ ಈ ಕುರಿತು ಸುದೀರ್ಘ ಚರ್ಚೆ ನಡೆಯಿತು. ಅಧ್ಯಕ್ಷ ಅಕ್ರಮ್ ಶರೀಫ್ ಅವರು ಮಾತನಾಡಿ, ಮೊದಲ ಅವಧಿಯಲ್ಲಿ ಪರಿಶಿಷ್ಟ ಜಾತಿಗೆ ಮೀಸಲಾತಿ ಅನ್ವಯ 30 ತಿಂಗಳ ಅವಧಿ ಪೂರ್ಣಗೊಂಡಿದೆ. ಎರಡನೇ ಅವಧಿಗೆ ಮೀಸಲಾತಿ ಪ್ರಕಟವಾದ ಬಳಿಕ 2024ರ ಆ.19ರಂದು ಎ.ಆರ್.ಅಶೋಕ ಅಧ್ಯಕ್ಷರಾದ



ದಿನದಿಂದ 30 ತಿಂಗಳ ಅವಧಿ ಇನ್ನೂ ಪೂರ್ಣಗೊಂಡಿಲ್ಲ. ಆದರೆ, ಪುರಸಭಾ ಮುಖ್ಯಾಧಿಕಾರಿಗಳು ಸದಸ್ಯರ ಅವಧಿ 3-10-2026ಕ್ಕೆ ಪೂರ್ಣಗೊಳ್ಳಲಿದೆ. ಇದರಿಂದ ಎರಡನೇ ಅವಧಿಯಲ್ಲಿ 26 ತಿಂಗಳ ಅವಧಿ ಮಾತ್ರ ದೊರೆಯುವಂತಾಗಿದ್ದು, ಉಳಿದ ನಾಲ್ಕು ತಿಂಗಳ ಅವಧಿಗಾಗಿ ನ್ಯಾಯಯುತ ಹೋರಾಟ ನಡೆಸಬೇಕಿದೆ ಎಂದು ತಿಳಿಸಿದರು.

» ನಾಲ್ಕನೇ ಪುಟದಲ್ಲಿ

### ಜನಪ್ರತಿನಿಧಿಗಳೇ ಪ್ರಶ್ನಿಸಬೇಕು

ಪುರಸಭೆ 1962ರ ಅಧಿನಿಯಮದ ಪ್ರಕಾರ ಮೀಸಲಾತಿ ಪ್ರಕಟವಾಗಿ ಅಧ್ಯಕ್ಷರ ಆಯ್ಕೆಯಾದ ಮೊದಲ ಸಭೆಯಿಂದ 30 ತಿಂಗಳ ಅವಧಿ ಇರಲಿದೆ ಎಂದು ಮುಖ್ಯಾಧಿಕಾರಿ ಬಸವರಾಜ್ ಅವರು ಸ್ಪಷ್ಟಪಡಿಸಿದರು. 2ನೇ ಅವಧಿಯಲ್ಲಿ ಅವಧಿ ಕಡಿಮೆಯಾಗಿದೆ ಎಂಬ ವಿಷಯವನ್ನು ಅಧ್ಯಕ್ಷರು ಈಗಾಗಲೇ ಸಭೆ ಯಲ್ಲಿ ಪ್ರಸ್ತಾಪಿಸಿದ್ದಾರೆ. ಈ ಕುರಿತು ಜನ ಪ್ರತಿನಿಧಿಗಳೇ ಪ್ರಶ್ನಿಸಬೇಕೇ ಹೊರತು ಅಧಿ ಕಾರಿಗಳಾಗಿ ನಾವು ಪ್ರಶ್ನಿಸಲು ಬರುವುದಿಲ್ಲವಂದು ತಿಳಿಸಿದರು.

# ಹಣದ ವಿಚಾರಕ್ಕೆ ವ್ಯಕ್ತಿ ಮೇಲೆ ಮಾರಣಾಂತಿಕ ಹಲ್ಲೆ

• ಪ್ರಜೋದಯ ವರದಿ

**ಬೇಲೂರು:** ಶುಂಠಿ ಬೆಳೆಯಲು ಗುತ್ತಿಗೆ ಆಧಾರದಲ್ಲಿ ಜಮೀನು ನೀಡಿದ್ದ ಮಾಲೀಕನ ಮೇಲೆ ಪಿಕಾಸಿಯಿಂದ ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ತಾಲ್ಲೂಕಿನ ನೆಟ್ಟೇಕೆರೆ ಗ್ರಾಮದಲ್ಲಿ ಬುಧವಾರ ನಡೆದಿದೆ.

ಗ್ರಾಮದ ಚಂದ್ರೇಗೌಡ ಗಾಯಗೊಂಡಿದ್ದಾರೆ. ಬಿಕ್ಕೋಡಿನ ಸಂತೋಷ್ ಹಾಗು ಆಲೂರು ತಾಲ್ಲೂಕು ಕೋಟಿಗನಹಳ್ಳಿ ಗ್ರಾಮದ ಕುಮಾರ್ ಎಂಬುವವರು ಹಲ್ಲೆ ನಡೆಸಿದ್ದಾರೆ ಎನ್ನಲಾಗಿದೆ. ಒಂದು ವರ್ಷದ

» ನಾಲ್ಕನೇ ಪುಟದಲ್ಲಿ

# ಹಿಂದೂ ಮಹಾಗಣಪತಿ ವಿಸರ್ಜನಾ ಮಹೋತ್ಸವ

## ಬಿಗಿ ಪೊಲೀಸ್ ಭದ್ರತೆಯಲ್ಲಿ ಮೆರವಣಿಗೆ | ಸಾವಿರಾರು ಜನರು ಭಾಗಿ

• ಪ್ರಜೋದಯ ವರದಿ

**ಹಾಸನ:** ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಹಿಂದೂ ಪರ ಸಂಘಟನೆಗಳಿಂದ ಪ್ರತಿಷ್ಠಾಪಿಸಿದ್ದ ಹಿಂದೂ ಮಹಾಗಣಪತಿ ವಿಸರ್ಜನೆ ಮಹೋತ್ಸವ ಸಾವಿರಾರು ಜನರ ಹರ್ಷೋದ್ಗಾರದೊಂದಿಗೆ ಬುಧವಾರ ನೆರವೇರಿತು. ಮಾಜಿ ಶಾಸಕ ಪ್ರೀತಮ್ ಗೌಡ ಅವರು ಮೆರವಣಿಗೆ ಆರಂಭವಾದಾಗಿನಿಂದ ಕೊನೆಯವರೆಗೂ ಜೊತೆಗಿದ್ದು ನಿಗಾವಹಿಸಿದರು.

ಸೆ.14 ರಿಂದ ಸೆ.23ರ ವರೆಗೆ ಪ್ರತಿದಿನ ಪೂಜಾ ಕೈಂಕರ್ಯ, ಅನ್ನ ಪ್ರಸಾದ ವಿನಿಯೋಗ ನೆರವೇರಿತು.



ಬುಧವಾರ ಮಧ್ಯಾಹ್ನ 12 ಗಂಟೆಗೆ ಶ್ರೀ ಆಂಜನೇಯಸ್ವಾಮಿ ದೇವಾಲಯದ ಪ್ರಧಾನ ಅರ್ಚಕ ರಕ್ಷಿತ್ ಭಾರದ್ವಾಜ್ ಅವರು ಪೂಜಾ ವಿಧಿ ವಿಧಾನ ಪೂರ್ಣಗೊಳಿಸಿದ ಬಳಿಕ ಟ್ರ್ಯಾಕ್ಟರ್‌ನಲ್ಲಿ ಗಣಪತಿ ಮೂರ್ತಿಯನ್ನು ಕೂರಿಸಲಾಯಿತು. ಗಣಪತಿ ಹಾಗು ಗೌರಿಗೆ ವಿಶೇಷ ಅಲಂಕಾರ ಮಾಡಿದ ಬಳಿಕ ಮಧ್ಯಾಹ್ನ 2 ಗಂಟೆಗೆ

» ನಾಲ್ಕನೇ ಪುಟದಲ್ಲಿ

# ಕರ್ತವ್ಯ ಲೋಪ: ಭೂಮಾಪಕ ಅಮಾನತು

• ಪ್ರಜೋದಯ ವರದಿ

**ಸಕಲೇಶಪುರ:** ಬೆಳಗೋಡು ಹೋಬಳಿಯ ಉದೇವಾರ ಗ್ರಾಮದ ಸರ್ವೆ ನಂ.173ಕ್ಕೆ ಸಂಬಂಧಿಸಿದ ಸರ್ವೆ ಹಾಗು ಸ್ಕೆಚ್ ತಯಾರಿಕೆ ಪ್ರಕರಣದಲ್ಲಿ ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದ ಹಿನ್ನಲೆಯಲ್ಲಿ ಸಕಲೇಶಪುರ ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಚೇರಿಯ ಭೂಮಾಪಕ ಎಸ್.ಆರ್.ಮನು ಅವರನ್ನು ಅಮಾ ನತುಗೊಳಿಸಲಾಗಿದೆ.

ಜಿಲ್ಲಾಧಿಕಾರಿ ತಾಂತ್ರಿಕ ಸಹಾಯಕರು ಹಾಗು ಪದನಿಮಿತ್ತ ಭೂದಾಖಲೆಗಳ ಉಪನಿರ್ದೇಶಕಿ ಎಂ.ಡಿ. ಹೇಮಲತಾ ಅವರು ಸೆ.22ರಂದು ಅಮಾನತು ಆದೇಶ ಹೊರಡಿಸಿದ್ದಾರೆ. ಉದೇವಾರದ ಸರ್ವೆ ನಂ.173ರ ಜಮೀನಿಗೆ ಸಂಬಂಧಿಸಿ ಯು.ಕೆ. ಶಂಕರಾಚಾರ್ ಅವರು ಜು.10ರಂದು ದೂರು ಸಲ್ಲಿಸಿದ್ದರು. ತಾವು ಸ್ವಾಧೀನಾನುಭವದಲ್ಲಿರುವ ಜಮೀನಿನ ಸರ್ವೆ ನಡೆಸುವ ಸಂದರ್ಭದಲ್ಲಿ ನೋಟೀಸ್ ಅಥವಾ ಮಾಹಿತಿ ನೀಡದೆ ಬೇಲಿ



ದಾಟಿ ಸರ್ವೆ ನಡೆಸಲಾಗಿದೆ. ಅಲ್ಲದೆ, ಸರ್ವೆ ವರದಿಯಲ್ಲಿ ತಮ್ಮ ಸಹಿಯನ್ನು ನಕಲು ಮಾಡಿ ಮಾಲತಿ ನೇತ್ರಾನಂದ ಅವರ ಹೆಸರಿಗೆ ಅನುಕೂಲವಾಗುವಂತೆ ಸ್ಕೆಚ್ ತಯಾರಿಸಲಾಗಿದೆ ಎಂದು ದೂರಿನಲ್ಲಿ ಆರೋಪಿಸಲಾಗಿತ್ತು.

ದೂರುದಾರರ ಪ್ರಕಾರ, ಸರ್ವೆ ನಂ.173ರಲ್ಲಿ ಒಟ್ಟು 3 ಎಕರೆ ಜಮೀನಿದ್ದು, ಈ ಪೈಕಿ 1 ಎಕರೆ 17 ಗುಂಟೆ ಜಮೀನು ಶಂಕರಾಚಾರ್ ಅವರ ಹೆಸರಿಗೆ ಮಂಜೂರಾಗಿದೆ. ಉಳಿದ 1 ಎಕರೆ 23 ಗುಂಟೆ ಜಮೀನು ಸಹ ತಮ್ಮ ಸ್ವಾಧೀನಾನುಭವದಲ್ಲಿದ್ದು, ಕಾಫಿ, ಕಾಳುಮೆಣಸು ಸೇರಿ ವಿವಿಧ ಬೆಳೆಗಳನ್ನು ಬೆಳೆದಿರುವುದಾಗಿ ದೂರಿನಲ್ಲಿ ತಿಳಿಸಿದ್ದರು.

ಈ ನಡುವೆ ಮಾಲತಿ ನೇತ್ರಾನಂದ ಅವರ ಹೆಸರಿಗೆ ತಯಾರಿಸಲಾದ ಸರ್ವೆ ಸ್ಕೆಚ್‌ನಲ್ಲಿ ನ್ಯೂನತೆಗಳಿವೆ ಎಂಬ ಆರೋಪವೂ ಕೇಳಿಬಂದಿತ್ತು. ಸ್ಕೆಚ್ ರದ್ದುಪಡಿಸಿ ಒಂದು ತಿಂಗಳೊಳಗೆ ಹೊಸ ಸ್ಕೆಚ್ ತಯಾರಿಸುವುದಾಗಿ ಭೂಮಾಪಕರು ಛಾಪಾ ಕಾಗದದಲ್ಲಿ ಬರೆದುಕೊಟ್ಟು ನೋಟರಿ ದೃಢೀಕರಣ ಮಾಡಿಸಿದ್ದಾರೆಂಬ ಅಂಶವೂ ಪ್ರಕರಣದಲ್ಲಿ ಉಲ್ಲೇಖಗೊಂಡಿದೆ.

ದೂರಿನ ಹಿನ್ನಲೆಯಲ್ಲಿ ಭೂದಾಖಲೆಗಳ ಸಹಾಯಕ ನಿರ್ದೇಶಕರು ವಿಚಾರಣೆ ಪ್ರಕ್ರಿಯೆ ಕೈಗೊಂಡಿದ್ದರು. ಸೆ.19ರಂದು ನಡೆದ ಪ್ರಜಾ ಸೇವಾ ಆಂದೋಲನ ಕಾರ್ಯಕ್ರಮದಲ್ಲಿಯೂ ಈ ಪ್ರಕರಣ ಪ್ರಸ್ತಾಪವಾಗಿದ್ದು, ಜಿಲ್ಲಾಧಿಕಾರಿ ಕೆ.ಎಸ್.ಲತಾ ಕುಮಾರಿ ಕ್ರಮಕ್ಕೆ ಸೂಚನೆ ನೀಡಿದ್ದರು.

ಭೂಮಾಪಕ ಎಸ್.ಆರ್.ಮನು ಅವರಿಂದ ಕರ್ತವ್ಯಲೋಪವಾಗಿ

» ನಾಲ್ಕನೇ ಪುಟದಲ್ಲಿ

## ಪೌರ ಕಾರ್ಮಿಕರ ದಿನಾಚರಣೆಯಲ್ಲಿ ಯೋಜನಾ ನಿರ್ದೇಶಕ ರುದ್ರಮುನಿ ಹೇಳಿಕೆ

# ಪೌರ ಕಾರ್ಮಿಕರಿಗೆ ಮನೆ ಕಟ್ಟಲು ಜಾಗ ಕೊಡಿ

• ಪ್ರಜೋದಯ ವರದಿ

**ಹಾಸನ:** ಪೌರ ಕಾರ್ಮಿಕರ ಗೃಹ ಭಾಗ್ಯ ಯೋಜನೆಯಡಿ ಮನೆ ನಿರ್ಮಾಣಕ್ಕೆ ಸರ್ಕಾರದಿಂದ 7.50 ಲ.ರೂ. ನೀಡಲಾಗುತ್ತಿದ್ದು, ಸ್ಥಳೀಯ ಸಂಸ್ಥೆಗಳು ಜಾಗ ಗುರುತಿಸಿಕೊಡಬೇಕೆಂದು ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ರುದ್ರಮುನಿ ಅವರು ಹೇಳಿದರು.

ನಗರದ ಮಹಾನಗರ ಪಾಲಿಕೆ ಆವರಣದಲ್ಲಿ ಬುಧವಾರ ಹಮ್ಮಿಕೊಂಡಿದ್ದ 15ನೇ ವರ್ಷದ ಪೌರ ಕಾರ್ಮಿಕರ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಪೌರ ಕಾರ್ಮಿಕರ ವಸತಿಗಾಗಿ ಜಾಗ ಗುರುತಿಸುವ ಅಗತ್ಯವಿದೆ. ಈ ನಿಟ್ಟಿನಲ್ಲಿ ತಹಶೀಲ್ದಾರ್‌ಗಳೊಂದಿಗೆ ಸಮಾಲೋಚಿಸಿ ಜಾಗ ಗುರುತಿಸಬೇಕು. ಕಾರ್ಪೋರೇಷನ್‌ಗೆ 10 ಎಕರೆ ಹಾಗು



ಪುರಸಭೆಗಳಿಗೆ ತಲಾ 5 ಎಕರೆ ಜಾಗ ಒದಗಿಸುವಂತೆ ಈಗಾಗಲೇ ಪತ್ರ ಬರೆಯಲಾಗಿದೆ ಎಂದರು.

ನಿವೇಶನ ಒದಗಿಸಿದರೆ ಮನೆ ನಿರ್ಮಾಣಕ್ಕೆ ಅನುದಾನ ನೀಡಲಾಗುವುದು. ಜಿಲ್ಲೆಯ ಬಾಣಾವರ ಸೇರಿ ಒಂಬತ್ತು ಸ್ಥಳೀಯ ಸಂಸ್ಥೆಗಳಲ್ಲಿ 525 ಪೌರ ಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದಾರೆ. ಎಸ್‌ಇಪಿ ಯೋಜನೆಯಡಿ ಪೌರ ಕಾರ್ಮಿಕರ ಆರೋಗ್ಯಕ್ಕೆ ಶೇ.20ರಷ್ಟು ಅನುದಾನ ಮೀಸಲಿಡಲಾಗಿದೆ. ಆರೋಗ್ಯ ವಿಮೆ, ವಿದ್ಯಾರ್ಥಿ ವೇತನ ಸೇರಿ ಸರ್ಕಾರದ ಎಲ್ಲಾ ಸೌಲಭ್ಯಗಳನ್ನು ಅವರಿಗೆ ತಲುಪಿಸಬೇಕೆಂದರು.

ಎರಡು ತಿಂಗಳ ಹಿಂದೆ ಸಫಾಯಿ ಪೌರ ಕಾರ್ಮಿಕರ ಆಯೋಗದ ಅಧ್ಯಕ್ಷರು ಸಭೆ ನಡೆಸಿದ್ದು, ಜಿಲ್ಲಾಧಿಕಾರಿಯೂ ಪೌರ ಕಾರ್ಮಿಕರೊಂದಿಗೆ ನೇರ ಸಂವಾದ ನಡೆಸಿದ್ದಾರೆ. ಪೌರ ಕಾರ್ಮಿಕರಿಗೆ ವಸತಿ ಹಾಗು ವಿಶ್ರಾಂತಿ ಗೃಹಗಳ ವ್ಯವಸ್ಥೆ ಕಲ್ಪಿಸಬೇಕು. ಪ್ರತಿ ತಿಂಗಳ 10ನೇ ತಾರೀಖಿನೊಳಗೆ ವೇತನ ಪಾವತಿಸಬೇಕು ಹಾಗು ಸಮವಸ್ತ್ರ ವಿತರಿಸಬೇಕೆಂದರು.

ನಗರಪಾಲಿಕೆ ಆಯುಕ್ತ ಆರ್. ಕೃಷ್ಣಮೂರ್ತಿ ಅವರು ಮಾತನಾಡಿ, ಪೌರ ಕಾರ್ಮಿಕರ ಶ್ರಮದಿಂದಲೇ ನಗರದ ಬೀದಿಗಳು ಸ್ವಚ್ಛವಾಗಿದ್ದು, ಸಾರ್ವಜನಿಕರ ಆರೋಗ್ಯ ಕಾಪಾಡಲು ಸಾಧ್ಯವಾಗುತ್ತಿದೆ. ಅವರ ಸೇವೆ ಅತ್ಯಂತ ಶ್ರೇಷ್ಠವಾದದ್ದು. ಇತರರು ವಿವಿಧ ಕಾರಣಗಳನ್ನು ಹೇಳಿ ಕೆಲಸದಿಂದ ನುಣುಚಿಕೊಳ್ಳಬಹುದು.



ಆದರೆ, ಪೌರ ಕಾರ್ಮಿಕರು ಯಾವುದೇ ಪರಿಸ್ಥಿತಿಯಲ್ಲೂ ತಮ್ಮ ಕರ್ತವ್ಯ ನಿರ್ವಹಿಸುತ್ತಾರೆ. ಕೋವಿಡ್ ಸಂದರ್ಭದಲ್ಲಿ ಸಹ ಜೀವದ ಹಂಗು ತೊರೆದು ಬೀದಿಗಿಳಿದು ಕೆಲಸ ಮಾಡಿದ್ದಾರೆ. ಅವರ ಶ್ರಮದಿಂದಲೇ ಸ್ವಚ್ಛತೆ ಮತ್ತು ಆರೋಗ್ಯ ಸಾಧ್ಯವಾಗಿದೆ ಎಂದರು.

» ನಾಲ್ಕನೇ ಪುಟದಲ್ಲಿ

# ಸಕಲೇಶಪುರ: ಶೇ.54ಕ್ಕೂ ಅಧಿಕ ನೋಟಿಸ್ ವಿಚಾರಣೆ ಪೂರ್ಣ

## ಎಸ್‌ಐಆರ್: ಒಟ್ಟು 6,711 ನೋಟಿಸ್‌ಗಳ ಪೈಕಿ 3,700ಕ್ಕೂ ಹೆಚ್ಚು ಪ್ರಕರಣಗಳ ಇತ್ಯರ್ಥ

• ಪ್ರಜೋದಯ ವರದಿ

**ಸಕಲೇಶಪುರ:** ಸಕಲೇಶಪುರ ವಿಧಾನ ಸಭಾ ಕ್ಷೇತ್ರದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆ ಮುಂದುವರಿದಿದ್ದು, ಒಟ್ಟು 6,711 ನೋಟಿಸ್‌ಗಳ ಪೈಕಿ 3,700ಕ್ಕೂ ಹೆಚ್ಚು ಪ್ರಕರಣಗಳ ವಿಚಾರಣೆ ನಡೆಸಲಾಗಿದೆ ಎಂದು ಚುನಾವಣಾಧಿಕಾರಿ ಹಾಗೂ ಉಪವಿಭಾಗಾಧಿಕಾರಿ ಹುಲ್ಲುಮನಿ ತಿಮ್ಮಣ್ಣ ತಿಳಿಸಿದರು.



ಪಟ್ಟಣದ ಮಿನಿ ವಿಧಾನಸೌಧ ಸಭಾಂಗಣದಲ್ಲಿ ರಾಜಕೀಯ ಪಕ್ಷಗಳ ಮುಖಂಡರ ಸಭೆಯಲ್ಲಿ ಪ್ರಕ್ರಿಯೆಯ ಪ್ರಗತಿ ಹಾಗೂ ಅಂಕಿ-ಅಂಶಗಳ ಕುರಿತು ಮಾಹಿತಿ ನೀಡಿದ ಅವರು, ಕ್ಷೇತ್ರದಲ್ಲಿ ನೋ ಮ್ಯಾಪಿಂಗ್‌ಗೆ ಸಂಬಂಧಿಸಿದ 3,634 ಹಾಗೂ ಅನಾಮಲಸ್ ಪ್ರಕರಣಗಳಿಗೆ ಸಂಬಂಧಿಸಿದ 3,077 ಸೇರಿ ಒಟ್ಟು 6,711 ನೋಟಿಸ್‌ಗಳನ್ನು ನೀಡಲಾಗಿದೆ. ಶೇ.100 ರಷ್ಟು ನೋಟಿಸ್‌ಗಳನ್ನು ಸಂಬಂಧಪಟ್ಟ ಮತದಾರರಿಗೆ ಜಾರಿಗೊಳಿಸಲಾಗಿದೆ ಎಂದು ಅವರು ಮಾಹಿತಿ ನೀಡಿದರು.

ಸಕಲೇಶಪುರ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 2,05,262 ಮತದಾರರಿದ್ದು, ಈ ಪೈಕಿ ಮೃತಪಟ್ಟವರು, ಎರಡು ಕಡೆ ನೋಂದಣಿಯಾಗಿರುವವರು ಹಾಗೂ ಸ್ಥಳಾಂತರಗೊಂಡಿರುವ ಕಾರಣಗಳಿಂದ 18,066 ಮತದಾರರ ಹೆಸರುಗಳನ್ನು ಕೈಬಿಡಲಾಗಿದೆ. ಇದೇ ವೇಳೆ ನಿಯಮಾನುಸಾರ 17,658 ಮತದಾರರನ್ನು ನೇರವಾಗಿ ಮತದಾರರ ಪಟ್ಟಿಗೆ ಸೇರ್ಪಡೆಗೊಳಿಸಲಾಗಿದೆ ಎಂದು ಅವರು ತಿಳಿಸಿದರು.

ನೋಟಿಸ್‌ಗಳ ವಿಚಾರಣೆಯಲ್ಲಿ ಈಗಾಗಲೇ 1,880 ಮತದಾರರು ಮತಪಟ್ಟಿಯಲ್ಲಿ ಮುಂದುವರಿಯಲು ಅರ್ಹರು ಎಂದು ನಿರ್ಧರಿಸಿ ಅವರ ಹೆಸರುಗಳನ್ನು ಉಳಿಸಿಕೊಳ್ಳಲು ಆದೇಶಿಸಲಾಗಿದೆ. ಉಳಿದ ಪ್ರಕರಣಗಳ ವಿಚಾರಣೆ ಮುಂದುವರಿದಿದ್ದು, ಅಗತ್ಯ ದಾಖಲೆಗಳನ್ನು ಸಲ್ಲಿಸಲು ಮತದಾರರಿಗೆ ಅವಕಾಶ ನೀಡಲಾಗುತ್ತಿದೆ ಎಂದರು.

ಒಟ್ಟು 6,711 ನೋಟಿಸ್‌ಗಳ ಪೈಕಿ ಸುಮಾರು 3,700 ಪ್ರಕರಣಗಳ ವಿಚಾರಣೆ ಪೂರ್ಣಗೊಂಡಿದ್ದು, ಶೇ.54ಕ್ಕೂ ಅಧಿಕ ನೋಟಿಸ್‌ಗಳ ವಿಚಾರಣೆ ನಡೆಸಲಾಗಿದೆ. ವಿಚಾರಣೆಗೆ ಹಾಜರಾಗದ ಸುಮಾರು 1,400 ಮಂದಿಗೆ ಮರು ದಿನಾಂಕ ನಿಗದಿಪಡಿಸಲಾಗಿದ್ದು, ಮತ್ತೊಮ್ಮೆ ಹಾಜರಾಗಿ ದಾಖಲೆಗಳನ್ನು ಸಲ್ಲಿಸಲು ಅವಕಾಶ ನೀಡಲಾಗಿದೆ ಎಂದು ಹೇಳಿದರು.

ಹಾಜರಾದರೂ ಅಗತ್ಯ ದಾಖಲೆಗಳನ್ನು ತರದವರಿಗೆ ಶಾಶ್ವತ ನಿವಾಸ ಪ್ರಮಾಣಪತ್ರ ಸೇರಿದಂತೆ ಅಗತ್ಯ ದಾಖಲೆಗಳನ್ನು ಸಲ್ಲಿಸಲು ಹೆಚ್ಚುವರಿ ಕಾಲಾವಕಾಶ ನೀಡಲಾಗುತ್ತಿದೆ.

ಸಕಲೇಶಪುರ ಕ್ಷೇತ್ರದಲ್ಲಿ ಎಂಟು ಮಂದಿ ಎಇಆರ್‌ಒಗಳು ಸೇರಿದಂತೆ ಅಧಿಕಾರಿಗಳು ವಿಚಾರಣೆ ನಡೆಸುತ್ತಿದ್ದಾರೆ. ಅನಾರೋಗ್ಯ ಅಥವಾ ವಯೋ ಸಹಜ ಕಾರಣಗಳಿಂದ ಕಚೇರಿಗೆ ಬರಲು ಸಾಧ್ಯವಾಗದವರ ಮನೆಗಳಿಗೆ ತೆರಳಿ ವಿಚಾರಣೆ ನಡೆಸಲಾಗುತ್ತಿದೆ. ಅವುಗಳ ಮಾಹಿತಿಯನ್ನೂ ಸದ್ಯದಲ್ಲೇ ಪ್ರಕಟಿಸಲಾಗುವುದು ಎಂದು ಹೇಳಿದರು.

ಯಾವುದೇ ಅರ್ಹ ಮತದಾರರು ಮತದಾರರ ಪಟ್ಟಿಯಿಂದ ಹೊರಗುಳಿಯದಂತೆ ಅಗತ್ಯ ದಾಖಲೆಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗುತ್ತಿದೆ. ವಿಚಾರಣೆ ಪ್ರಕ್ರಿಯೆಯನ್ನು ಕಾನೂನು ಬದ್ಧವಾಗಿ ಹಾಗೂ ಶಿಸ್ತುಬದ್ಧವಾಗಿ ನಡೆಸಲಾಗುತ್ತಿದೆ ಎಂದು ಹುಲ್ಲುಮನಿ ತಿಮ್ಮಣ್ಣ ಅವರು ತಿಳಿಸಿದರು.

ಇದೇ ಸಂದರ್ಭದಲ್ಲಿ ಆಲೂರು ತಹಶೀಲ್ದಾರ್ ಮಲ್ಲಿಕಾರ್ಜುನ್, ಸಕಲೇಶ ಪುರ ತಹಶೀಲ್ದಾರ್ ಸುಪ್ರೀತ್, ಪುರಸಭೆ ಮುಖ್ಯಾಧಿಕಾರಿ ಮಹೇಶ್ವರಪ್ಪ ಸೇರಿದಂತೆ ವಿವಿಧ ರಾಜಕೀಯ ಪಕ್ಷಗಳ ಮುಖಂಡರು ಉಪಸ್ಥಿತರಿದ್ದರು.

# ನಿಯಮಬಾಹಿರವಾಗಿ ಹಿಮ್ಸ್ ಪಾರ್ಕಿಂಗ್ ಟೆಂಡರ್

## ಕಾನೂನು ಹೋರಾಟದ ಎಚ್ಚರಿಕೆ

• ಪ್ರಜೋದಯ ವರದಿ

**ಹಾಸನ:** ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಆವರಣದ ವಾಹನ ನಿಲುಗಡೆ ಶುಲ್ಕ ವಸೂಲಾತಿ ಟೆಂಡರ್ ಪ್ರಕ್ರಿಯೆಯನ್ನು ನಿಯಮ ಬಾಹಿರವಾಗಿ ನಡೆಸಲಾಗಿದೆ ಎಂದು ವಕೀಲ ರಾಕೇಶ್ ಮಲ್ಲಿಗೆವಾಳು ಅವರು ಆರೋಪಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಂಗಳೂರಿನ ಮೆಸರ್ಸ್ ದೀಕ್ಷಾ ಎಂಟರ್‌ಪ್ರೈಸಸ್‌ಗೆ ನೀಡಿರುವ ಟೆಂಡರ್ ಆದೇಶದಲ್ಲಿ ಹಲವು ಗಂಭೀರ ಲೋಪಗಳಿದ್ದು, ಸರ್ಕಾರದ ಬೊಕ್ಕಸಕ್ಕೆ ಆರ್ಥಿಕ ನಷ್ಟ ಉಂಟಾಗುವ ಸಾಧ್ಯತೆ. ಟೆಂಡರ್‌ನಲ್ಲಿ ಮಾಸಿಕ 1.50 ಲಕ್ಷದಂತೆ 3 ವರ್ಷಗಳ ಅವಧಿಗೆ 36 ತಿಂಗಳ ಒಟ್ಟು ಮೊತ್ತ 54 ಲಕ್ಷವಾಗಬೇಕಿತ್ತು. ಆದರೆ, ಟೆಂಡರ್ ದಾಖಲೆಯಲ್ಲಿ ಒಟ್ಟು ಮೊತ್ತವನ್ನು ಕೇವಲ 4.50 ಲ.ರೂ. ಎಂದು ನಮೂದಿಸಲಾಗಿದೆ. ಈ ಲೆಕ್ಕಾಚಾರದ ವ್ಯತ್ಯಾಸದಿಂದ 33 ತಿಂಗಳ ಆದಾಯದ ವಿಚಾರದಲ್ಲಿ ಗಂಭೀರ ಪ್ರಶ್ನೆ ಉದ್ಭವಿಸಿವೆ ಎಂದು ಅವರು ದೂರಿದರು.

ಮುಂದಿನ ದಿನಗಳಲ್ಲಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಉದ್ಘಾಟನೆ ಹಿನ್ನಲೆ ಪಾರ್ಕಿಂಗ್ ಆದಾಯ ಹೆಚ್ಚಾಗುವ ಸಾಧ್ಯತೆ ಇದ್ದರೂ, ಹಳೇ ಅಂದಾಜಿನಲ್ಲೇ ಟೆಂಡರ್ ಪ್ರಕ್ರಿಯೆ ನಡೆಸಲಾಗಿದೆ. ಟೆಂಡರ್ ಪ್ರಕ್ರಿಯೆಯಲ್ಲಿ ಹಲವು ನಿಯಮ ಉಲ್ಲಂಘಿಸಿದ್ದು, ಈ ಕುರಿತು ಪರಿಶೀಲನೆ ನಡೆಯಬೇಕು. ವಾಹನ ಕಳ್ಳತನವಾದರೆ ಸಂಸ್ಥೆ ಯಾವುದೇ ಜವಾಬ್ದಾರಿ ಹೊರುವುದಿಲ್ಲವೆಂಬ ಷರತ್ತನ್ನೂ ಟೆಂಡರ್‌ನಲ್ಲಿ ವಿಧಿಸಿರುವುದು ಪ್ರಶ್ನಾರ್ಹವಾಗಿದೆ. ಕಾರ್ಮಿಕರ ನಿಯೋಜನೆ, ಕಾರ್ಮಿಕ ಕಾಯ್ದೆ ಪಾಲನೆ, ಜಿಎಸ್‌ಟಿ ಸೇರಿ ಹಲವು ವಿಚಾರಗಳಲ್ಲೂ ಪಾರದರ್ಶಕತೆ ಕಾಪಾಡಲಾಗಿದೆಯೇ ಎಂಬುದನ್ನು ಅಧಿಕಾರಿಗಳು ಸ್ಪಷ್ಟಪಡಿಸಬೇಕೆಂದು ಒತ್ತಾಯಿಸಿದರು.




ರೋಗಿಗಳು ಮತ್ತು ಸಾರ್ವಜನಿಕರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಟೆಂಡರ್ ಪ್ರಕ್ರಿಯೆ ಮರು ಪರಿಶೀಲಿಸಬೇಕು. ಹಿಮ್ಸ್ ಆಡಳಿತ ಮಂಡಳಿ ಹಾಗು ಸಂಬಂಧಪಟ್ಟ ಅಧಿಕಾರಿಗಳು ಸಮಗ್ರವಾಗಿ ಪರಿಶೀಲನೆ ನಡೆಸಬೇಕು. ಆಡಳಿತ ಮಂಡಳಿ ಸದಸ್ಯರ ಗಮನಕ್ಕೂ ಬಾರದಂತೆ ಇಂತಹ ಮಹತ್ವದ ನಿರ್ಧಾರ ಕೈಗೊಳ್ಳಲಾಗಿದೆಯೇ ಎಂಬುದನ್ನೂ ಸ್ಪಷ್ಟಪಡಿಸಬೇಕೆಂದು ಅವರು ಹೇಳಿದರು.

ಪ್ರಸ್ತುತ ನಡೆದಿರುವ ಪಾರ್ಕಿಂಗ್ ಟೆಂಡರ್ ಪ್ರಕ್ರಿಯೆಯನ್ನು 7 ದಿನಗಳೊಳಗೆ ರದ್ದುಪಡಿಸಿ, ದಾಖಲೆ ಪರಿಶೀಲಿಸದಿದ್ದರೆ ಕಾನೂನು ಹೋರಾಟ ನಡೆಸಲಾಗುವುದು. ಅಗತ್ಯವಿದ್ದಲ್ಲಿ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಲಾಗುವುದು. ಲೋಕಾಯುಕ್ತ ತನಿಖೆಗೆ ಒಪ್ಪಿಸುವಂತೆ ಮನವಿ ಮಾಡಲಾಗುವುದು. ತಪ್ಪಿತಸ್ಥರ ವಿರುದ್ಧ ಕ್ರಮಕ್ಕಾಗಿ ಕ್ರಿಮಿನಲ್ ದೂರು ದಾಖಲಿಸುವ ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ವಕೀಲ ಸುಚೇತನ್ ಅವರು ಹಾಜರಿದ್ದರು.

# ರಾಜ್ಯಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆ



ಹಾಸನ: ನಗರದಲ್ಲಿ ನಡೆದ 17 ವರ್ಷದೊಳಗಿನ ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ದುದ್ದ ಹೋಬಳಿಯ ಅಟ್ಟಾವರ ಸರ್ಕಾರಿ ಪ್ರೌಢ ಶಾಲೆಯ ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆ ಮಾಡಿ ಮುಂದಿನ ಹಂತಕ್ಕೆ ಆಯ್ಕೆಯಾಗಿದ್ದಾರೆ.

3000 ಮೀಟರ್ ಓಟದಲ್ಲಿ ವಿದ್ಯಾರ್ಥಿನಿ ಧನ್ಯ ದ್ವಿತೀಯ ಸ್ಥಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಬಾಲ್ ಬ್ಯಾಡ್ಮಿಂಟನ್ ವಿಭಾಗದಲ್ಲಿ ವಿದ್ಯಾರ್ಥಿ ಮದನ್ ದ್ವಿತೀಯ ಸ್ಥಾನ ಪಡೆದು ವಿಭಾಗೀಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಈ ಮಕ್ಕಳ ಸಾಧನೆಗೆ ತರಬೇತಿ ನೀಡಿದ ದೈಹಿಕ ಶಿಕ್ಷಣ ಶಿಕ್ಷಕರಾದ ಸುಜಿತ್‌ಅವರನ್ನು ಹಾಗೂ ವಿದ್ಯಾರ್ಥಿಗಳನ್ನು ಶಾಲೆಯ ಮುಖ್ಯೋಪಾಧ್ಯಾಯರು, ಶಿಕ್ಷಕರು ಮತ್ತು ಸಿಬ್ಬಂದಿ ವರ್ಗದವರು ಅಭಿನಂದಿಸಿ ಶುಭ ಹಾರೈಸಿದ್ದಾರೆ.

# ಗುತ್ತಿನಕೆರೆ ಗಣಪತಿ ಉತ್ಸವದ ವೈಭವ



• ಪ್ರಜೋದಯ ವರದಿ

**ಹಾರನಹಳ್ಳಿ:** ಸಮೀಪದ ಗುತ್ತಿನಕೆರೆ ಗ್ರಾಮದ ಶ್ರೀ ರಂಗನಾಥಸ್ವಾಮಿ ದೇವಾಲಯದಲ್ಲಿ ಪ್ರತಿಷ್ಠಾಪಿಸಲಾಗಿದ್ದ ಮಹಾಗಣಪತಿ ಉತ್ಸವವು ಅತ್ಯಂತ ವೈಭವದಿಂದ ನಡೆಯಿತು.

ಚಂದ್ರಮಂಡಲ ವಾಹನದಲ್ಲಿ ದೇವರುಗಳಿಗೆ ಬಣ್ಣ ಬಣ್ಣದ ತೋಮಾಲೆ, ದಿಂಡು, ಪತ್ತಮಾಲೆ, ವಿವಿಧ ಬಣ್ಣದ ಹಾರ ಹೂವುಗಳಿಂದ ಶೃಂಗಾರ ಮಾಡಲಾಯಿತು. ಮಹಾ ಮಂಗಳಾರತಿ ನಡೆದ ನಂತರ ಶ್ರೀ ಧೂತರಾಯಸ್ವಾಮಿ, ಶ್ರೀ ಚಲುವರಾಯಸ್ವಾಮಿ ಇಡುಕಾಯಿ ಒಡೆದು ಉತ್ಸವಕ್ಕೆ ಚಾಲನೆ ನೀಡಿದರು.

ಚಂದ್ರಮಂಡಲ ವಾಹನದಲ್ಲಿ ಶ್ರೀ ಮಹಾಗಣಪತಿ, ಶ್ರೀ ರಂಗನಾಥ ಸ್ವಾಮಿ ಹಾಗೂ ಇತರ ಗ್ರಾಮ ದೇವತೆಗಳನ್ನು ಕೂರಿಸಿ ಗ್ರಾಮದ ಪ್ರಮುಖ ರಸ್ತೆಗಳಲ್ಲಿ ಅದ್ದೂರಿ ಮೆರವಣಿಗೆ ನಡೆಸಲಾಯಿತು.

ಮನೆ ಸಮೀಪ ಬಂದ ವಿನಾಯಕನಿಗೆ ಭಕ್ತರು ಹಣ್ಣು-ಕಾಯಿ ನೀಡಿ ಭಕ್ತಿ ಸಮರ್ಪಿಸಿದರು. ಸೋಮನ ಕುಣಿತ, ಅರೆ ಕರಡೆ ವಾದ್ಯಗಳು ಉತ್ಸವಕ್ಕೆ ಮೆರಗು ನೀಡಿದವು.

ಗಣಪತಿ ಮಂಡಳಿಯ ಯುವಕರು ಹಾಗೂ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ಮೂಲಕ ಸಂಭ್ರಮಪಟ್ಟರು. ನಂತರ ಹಾರನಹಳ್ಳಿ ದೊಡ್ಡಕೆರೆಯಲ್ಲಿ ಗಣಪತಿ ವಿಸರ್ಜನೆ ನೆರವೇರಿತು.

# ಅಪೌಷ್ಟಿಕತೆ ನಿವಾರಿಸುವ ಪೋಷಣ್ ಅಭಿಯಾನ

## ಪೌಷ್ಟಿಕಾಂಶಯುಕ್ತ ಆಹಾರದ ಬಗ್ಗೆ ಜಾಗೃತಿ ಅತ್ಯಗತ್ಯ

• ಪ್ರಜೋದಯ ವರದಿ



**ಆಲೂರು:** ಮಕ್ಕಳು, ಹದಿಹರೆಯದವರು, ಗರ್ಭಿಣಿ ಹಾಗೂ ಬಾಣಂತಿಯರಲ್ಲಿ ಅಪೌಷ್ಟಿಕತೆಯನ್ನು ನಿವಾರಿಸುವ ಉದ್ದೇಶದಿಂದ ಪೋಷಣ್ ಅಭಿಯಾನದಡಿ ಪೋಷಣ್ ಮಾಸಾಚರಣೆಯನ್ನು ಏರ್ಪಡಿಸಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮೇಲ್ವಿಚಾರಕಿ ಆಶಾ ಅವರು ತಿಳಿಸಿದರು.

ಮಲ್ಲಾಪುರ ಗ್ರಾಮ ಪಂಚಾಯಿತಿ ಸಭಾಂಗಣದಲ್ಲಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸೆಪ್ಟೆಂಬರ್ ಮಾಹೆಯಲ್ಲಿ ವಿವಿಧ ಚಟುವಟಿಕೆಗಳ ಮೂಲಕ ಗರ್ಭಿಣಿ, ಬಾಣಂತಿಯರು ಹಾಗೂ ಹದಿಹರೆಯದವರಿಗೆ ಆರೋಗ್ಯದ ಮಟ್ಟವನ್ನು ಸುಧಾರಿಸುವ ಉದ್ದೇಶವನ್ನೊಳಗೊಂಡಿದೆ. ಇಂತಹ ಕಾರ್ಯಕ್ರಮವನ್ನು ಏರ್ಪಡಿಸುವ ಮೂಲಕ ಪೌಷ್ಟಿಕಾಂಶ ಆಹಾರ ಸೇವನೆಯ ಕುರಿತು ಸಮರ್ಪಕ ಮಾಹಿತಿ ಲಭಿಸಿದಂತಾಗುತ್ತದೆ ಎಂದರು.

ನಿವೃತ್ತ ಸಿಡಿಪಿಓ ಎ. ಟಿ. ಮಲ್ಲೇಶ್ ಮಾತನಾಡಿ, ಪೋಷಣ್ ಅಭಿಯಾನದಡಿ ಅಂಗನವಾಡಿ, ಆಶಾ ಕಾರ್ಯಕರ್ತರು, ಗರ್ಭಿಣಿಯರಿಗೆ, ಬಾಣಂತಿಯರಿಗೆ ಹಾಗೂ ಹದಿಹರೆಯದವರಿಗೆ ಪೌಷ್ಟಿಕಾಂಶಯುಕ್ತ ಆಹಾರದ ಬಗ್ಗೆ ಜಾಗೃತಿ ಮೂಡಿಸಬೇಕು ಎಂದರು.

ರೈತ ಸಂಘದ ಕಾರ್ಯದರ್ಶಿ ಜಯಣ್ಣ ಮಾತನಾಡಿ, ಮಕ್ಕಳು ಅಪೌಷ್ಟಿಕತೆಯಿಂದ ಹೊರಬರಲು ಪೌಷ್ಟಿಕ ಆಹಾರವನ್ನು ಸೇವಿಸಬೇಕು, ಇತ್ತೀಚಿನ ದಿನಗಳಲ್ಲಿ ಆಹಾರದಲ್ಲಿ ರಾಸಾಯನಿಕ ವಸ್ತುಗಳು ಸೇರಿವೆ. ಮತ್ತೊಂದೆಡೆ ಪೋಷಕರು ಮಕ್ಕಳಿಗೆ ಹೆಚ್ಚಾಗಿ ಜಂಕ್‌ಫುಡ್ ಕೊಡಿಸುತ್ತಿರುವುದರಿಂದ ಮಕ್ಕಳ ಆರೋಗ್ಯದಲ್ಲಿ ಏರುಪೇರು ಹೆಚ್ಚು ಕಾಣಿಸುತ್ತಿದೆ, ಮಕ್ಕಳ ಉತ್ತಮ ಆರೋಗ್ಯಕ್ಕಾಗಿ ಮೊಳಕೆ ಕಟ್ಟಿದ ಕಾಳು, ಹಣ್ಣು, ಸೊಪ್ಪು, ತರಕಾರಿ ಮೊಟ್ಟೆ, ಹಾಲು, ಪದಾರ್ಥಗಳನ್ನ ಹೆಚ್ಚಾಗಿ ಮಕ್ಕಳಿಗೆ ತಿನ್ನಿಸಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ನಿವೃತ್ತ ಸಿಡಿಪಿಒ ಎ.ಟಿ.ಮಲ್ಲೇಶ್, ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಜಯಣ್ಣ ಹೈದೂರು, ಮುಖ್ಯ ಶಿಕ್ಷಕಿ ನಾಗರತ್ನ, ಪ್ರೌಢಶಾಲಾ ಮುಖ್ಯ ಶಿಕ್ಷಕ ಶಿವಕುಮಾರ್, ಅಶ್ರಫ್, ಅಂಗನವಾಡಿ ಕಾರ್ಯಕರ್ತೆ ಗಾಯತ್ರಿ, ಅಂಗನವಾಡಿ, ಆಶಾ ಕಾರ್ಯಕರ್ತೆಯರು, ಪೋಷಕರು ಉಪಸ್ಥಿತರಿದ್ದರು.

# ಹೇಮಾವತಿ ಕುಡಿಯುವ ನೀರು ಸ್ಥಗಿತ: ಗ್ರಾಮಸ್ಥರಿಗೆ ತೊಂದರೆ

• ಪ್ರಜೋದಯ ವರದಿ

**ಹಾರನಹಳ್ಳಿ:** ಹೇಮಾವತಿ ಕುಡಿಯುವ ನೀರು ಕಳೆದ ಹಲವು ದಿನಗಳಿಂದ ಸ್ಥಗಿತಗೊಂಡಿರುವುದರಿಂದ ಹಾರನಹಳ್ಳಿ ಸೇರಿದಂತೆ ಸುತ್ತಮುತ್ತಲಿನ ಹಲವು ಗ್ರಾಮಗಳಲ್ಲಿ ಶುದ್ಧ ಕುಡಿಯುವ ನೀರಿಗೆ ತೀವ್ರ ತೊಂದರೆಯಾಗಿದೆ.



ಹೇಮಾವತಿ ಬಹು ಗ್ರಾಮ ಕುಡಿಯುವ ನೀರಿನ ಯೋಜನೆಯಡಿ ಈ ಹಿಂದೆ ನಿರಂತರವಾಗಿ ಶುದ್ಧ ನೀರು ಪೂರೈಕೆಯಾಗುತ್ತಿತ್ತು. ಆದರೆ ಕಳೆದ ಹಲವು ದಿನಗಳಿಂದ ದುರಸ್ತಿ ಮತ್ತು ನಿರ್ವಹಣೆ ಕೊರತೆಯಿಂದ ನೀರು ಬಿಡದ ಕಾರಣ ಜನರು ಪರದಾಡುವಂತಾಗಿದೆ.

ಮಳೆ ಇಲ್ಲದೆ ಈಗಾಗಲೇ ಕಂಗಾಲಾಗಿರುವ ರೈತರಿಗೆ ಕುಡಿಯುವ ನೀರಿನ ಸಮಸ್ಯೆ ಮತ್ತಷ್ಟು ಸಂಕಷ್ಟ ತಂದಿದೆ. ಸದ್ಯ ಗ್ರಾಮದ ಕೊಳವೆ ಬಾವಿಯನ್ನು ದುರಸ್ತಿ ಮಾಡಲಾಗಿದ್ದು ತಾತ್ಕಾಲಿಕವಾಗಿ ನೀರು ಪೂರೈಕೆಯಾಗುತ್ತಿದೆ. ಆದರೆ ಹೇಮಾವತಿ ನೀರು ಬಾರದಿದ್ದರೆ ಮುಂದೆ ಸಮಸ್ಯೆ ತೀವ್ರ ರೀತಿಯಲ್ಲಿ ಮತ್ತಷ್ಟು ಬಿಗಡಾಯಿಸುವ ಆತಂಕವಿದೆ.

ಈಗಾಗಲೇ ಮಳೆ ಇಲ್ಲದೆ ಜಾನುವಾರು ಮತ್ತು ಜನಗಳಿಗೂ ನೀರಿನ ತೊಂದರೆ ಎದುರಾಗಿದೆ.

**ಗ್ರಾಮಸ್ಥರ ಒತ್ತಾಯ:** ಜಿಲ್ಲಾ ಉಸ್ತುವಾರಿ ಸಚಿವರು ಕೂಡಲೇ ಮಧ್ಯಪ್ರವೇಶಿಸಿ ಹೇಮಾವತಿ ಕುಡಿಯುವ ನೀರನ್ನು ತಕ್ಷಣ ಬಿಡುಗಡೆ ಮಾಡಿಸುವಂತೆ ಗ್ರಾಮಸ್ಥರು ಒತ್ತಾಯಿಸಿದ್ದಾರೆ.

# ಸೆ.30 ರಂದು ಉಜ್ಜಯಿನಿ ಶ್ರೀಗಳ ಅಡ್ಡಪಲ್ಲಕ್ಕಿ ಮಹೋತ್ಸವ

• ಪ್ರಜೋದಯ ವರದಿ




## ಅ.1 ರಂದು ಉಜ್ಜಯಿನಿ ಜಗದ್ಗುರುಗಳ ಇಷ್ಟಲಿಂಗ ಮಹಾಪೂಜೆ

**ಹಾಸನ:** ಉಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರ ಶ್ರೀ 1008 ಜಗದ್ಗುರು ಸಿದ್ಧಲಿಂಗ ರಾಜದೇಶಿ ಕೇಂದ್ರ ಶಿವಾಚಾರ್ಯ ಭಗವತ್ಪಾದರ ಅಡ್ಡ ಪಲ್ಲಕ್ಕಿ ಮಹೋತ್ಸವ, ಇಷ್ಟಲಿಂಗ ಪೂಜೆ, ಧರ್ಮ ಜಾಗೃತಿ ಸಮಾವೇಶ, ಶ್ರೀ ವೀರಭದ್ರೇಶ್ವರ ಜಯಂತ್ಯೋತ್ಸವ ಸೆ.30 ಮತ್ತು ಅ.1 ರಂದು ಬೇಲೂರಿನಲ್ಲಿ ಆಯೋಜಿಸಲಾಗಿದೆ ಎಂದು ಸ್ವಾಗತ ಸಮಿತಿಯ ಗ್ರಾನೈಟ್ ರಾಜಶೇಖರ್ ಅವರು ತಿಳಿಸಿದರು.

ಬುಧವಾರ ಸುದ್ದಿಗೋಷ್ಟಿಯಲ್ಲಿ ಮಾತನಾಡಿದ ಅವರು, ಸೆ.30 ರಂದು ಮಧ್ಯಾಹ್ನ 1 ಗಂಟೆಗೆ ಉಜ್ಜಯಿನಿ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವ, ಸಂಜೆ 6 ಗಂಟೆಗೆ ಧರ್ಮ ಜಾಗೃತಿ ಸಮಾವೇಶ ನಡೆಯಲಿದೆ. ವಿವಿಧ ಮಠಾಧೀಶರು, ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ. ಶಿವಲಿಂಗೇಗೌಡ, ಸಣ್ಣ ಕೈಗಾರಿಕೆ ಸಚಿವ ವಿಜಯಾನಂದ ಕಾಶಪ್ಪನವರ್, ಸಂಸದ ಶ್ರೇಯಸ್ ಪಟೇಲ್, ಶಾಸಕ ಹೆಚ್.ಕೆ.ಸುರೇಶ್, ಮಾಜಿ ಶಾಸಕ ಕೆ.ಎಸ್.ಲಿಂಗೇಶ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ವೀಣಾ ಕಾಶಪ್ಪನವರ್, ಜಿಲ್ಲಾಡಳಿತದ ಅಧಿಕಾರಿಗಳು ಭಾಗಿಯಾಗಲಿದ್ದಾರೆ ಎಂದರು.

ಅ.1 ರಂದು ಉಜ್ಜಯಿನಿ ಜಗದ್ಗುರುಗಳ ಇಷ್ಟಲಿಂಗ ಮಹಾಪೂಜೆ, ಧರ್ಮಜಾಗೃತಿ ಸಂದೇಶ, ಶಿವದೀಕ್ಷೆ ಹಾಗು ಶ್ರೀ ವೀರಭದ್ರೇಶ್ವರ ಜಯಂತೋತ್ಸವ ಸೇರಿದಂತೆ ಹಲವು ಕಾರ್ಯಕ್ರಮ ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ಜಗದ್ಗುರುಗಳು, ಮಠಾಧೀಶರು, ಧಾರ್ಮಿಕ ಮುಖಂಡರು, ವೀರಶೈವ ಲಿಂಗಾಯತ ಸಮುದಾಯದ ಗಣ್ಯರು ಹಾಗೂ ಭಕ್ತರು ಭಾಗವಹಿಸಲಿದ್ದಾರೆ. ಇದೇ ಸಂದರ್ಭದಲ್ಲಿ ವಧು- ವರರ ನೋಂದಣಿ ಕಾರ್ಯಕ್ರಮವನ್ನೂ ಹಮ್ಮಿಕೊಳ್ಳಲಾಗಿದೆ ಎಂದು ಅವರು ತಿಳಿಸಿದರು.

ವೀರಶೈವ ಲಿಂಗಾಯತ ಜಂಗಮ ಪುರೋಹಿತರು ಹಾಗು ಅರ್ಚಕರ ಕ್ಷೇಮಾಭಿವೃದ್ಧಿಗೆ ಸಂಬಂಧಿಸಿದ ಟ್ರಸ್ಟ್‌ನ ಉದ್ಘಾಟನೆಯೂ ನಡೆಯಲಿದೆ. ಎರಡು ದಿನಗಳ ಕಾಲ ನಡೆಯುವ ಕಾರ್ಯಕ್ರಮದಲ್ಲಿ ಭಕ್ತರು ಹಾಗು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಮನವಿ ಮಾಡಿದರು.

ದೇವರಾಜ್ ಶಾಸ್ತ್ರಿ, ವಿಜಯ ಕುಮಾರ್ ಶಾಸ್ತ್ರಿ, ಶಿವಯ್ಯ ಶಾಸ್ತ್ರಿ, ಮಲ್ಲೇಶ್ ಶಾಸ್ತ್ರಿ, ಪರಮೇಶ್ ಶಾಸ್ತ್ರಿ, ಪ್ರಕಾಶ್ ಶಾಸ್ತ್ರಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# 88 ಡೆಸ್ಕ್‌ಗಳ ಕೊಡುಗೆ

• ಪ್ರಜೋದಯ ವರದಿ

**ಅರಕಲಗೂಡು:** ಸರ್ಕಾರಿ ಶಾಲೆಗಳಲ್ಲಿ ಮಕ್ಕಳಿಗೆ ಉತ್ತಮ ಕಲಿಕಾ ವಾತಾವರಣ ಕಲ್ಪಿಸುವ ಉದ್ದೇಶದಿಂದ ಐಟಿಸಿ ಕಂಪನಿಯ ವತಿಯಿಂದ ಅರಕಲಗೂಡು ತಾಲ್ಲೂಕಿನ ಆರು ಸರ್ಕಾರಿ ಶಾಲೆಗಳಿಗೆ ಒಟ್ಟು 88 ಡೆಸ್ಕ್‌ಗಳನ್ನು ಕೊಡುಗೆಯಾಗಿ ವಿತರಿಸಲಾಯಿತು.

ತಾಲ್ಲೂಕಿನ ಹಿರಹಳ್ಳಿ, ಮಲ್ಲಿನಾಥಪುರ, ನಿಲುವಾಗಿಲು, ಗುಡ್ಡೇನಹಳ್ಳಿ, ತಾತನಹಳ್ಳಿ ಹಾಗೂ ಕಾಳಮ್ಮನ ಕೊಪ್ಪಲು ಗ್ರಾಮಗಳ ಸರ್ಕಾರಿ ಶಾಲೆಗಳಿಗೆ ಡೆಸ್ಕ್‌ಗಳನ್ನು ವಿತರಿಸಲಾಗಿದ್ದು, ಇದರಿಂದ ಶಾಲಾ ಮಕ್ಕಳಿಗೆ ತರಗತಿಯಲ್ಲಿ ಕುಳಿತು ಪಾಠ ಕಲಿಯಲು ಹೆಚ್ಚಿನ ಅನುಕೂಲವಾಗಲಿದೆ.

ಶಾಲೆಗಳಲ್ಲಿ ಮೂಲಸೌಕರ್ಯಗಳ ಅಭಿವೃದ್ಧಿಗೆ ಕೈಜೋಡಿಸಿರುವ ಐಟಿಸಿ ಕಂಪನಿಯ ಕ್ರಮಕ್ಕೆ ಶಿಕ್ಷಕರು, ಎಸ್‌ಡಿಎಂಸಿ ಸದಸ್ಯರು ಹಾಗೂ ಗ್ರಾಮಸ್ಥರು ಮೆಚ್ಚುಗೆ ವ್ಯಕ್ತಪಡಿಸಿದರು.

ಮಾಜಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಹೀರೆಗೌಡ, ಐಟಿಸಿ ಕ್ಷೇತ್ರ ಮೇಲ್ವಿಚಾರಕ ಮಂಜುನಾಥ್, ಐಟಿಸಿ ಕ್ಷೇತ್ರ ಸಹಾಯಕ ತುಳಸಿರಾಮ್, ವಿವಿಧ ಶಾಲೆಗಳ ಎಸ್‌ಡಿಎಂಸಿ ಅಧ್ಯಕ್ಷರು ಹಾಗೂ ಸದಸ್ಯರು, ಶಿಕ್ಷಕರು ಮತ್ತು ಇತರರು ಉಪಸ್ಥಿತರಿದ್ದರು.



## ಚಿಕಿತ್ಸೆಗಿಂತ ತಡೆಗಟ್ಟುವಿಕೆ ಉತ್ತಮ: ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ಸತೀಶ್ ಕುಮಾರ್

# ಹಾವು ಕಡಿತದಿಂದ 2025-26 ನೇ ಸಾಲಿನಲ್ಲಿ 210 ಜನರ ಸಾವು

• ಪ್ರಜೋದಯ ವರದಿ

**ಹಾಸನ:** ಹಾವು ಕಡಿತದಲ್ಲಿ ಶೇ.30 ರಷ್ಟು ಮಾತ್ರ ವಿಷಕಾರಿ ಹಾವುಗಳಾಗಿರುತ್ತವೆ, ಹಾವು ಕಚ್ಚಿದ ತಕ್ಷಣ ಯಾವುದೇ ಸಾಂಪ್ರದಾಯಿಕ ನಾಟಿ ಔಷಧಿ ಪಡೆಯದೆ ಸಮೀಪದ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ. ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಹಾವು ಕಡಿತಕ್ಕೆ ಉಚಿತವಾಗಿ ಚಿಕಿತ್ಸೆ ನೀಡಲಾಗುವುದು. 2025ನೇ ಸಾಲಿನಲ್ಲಿ 16808 ಜನರಿಗೆ ಹಾವು ಕಡಿದಿದ್ದು, ಅದರಲ್ಲಿ 157 ಜನರ ಪ್ರಾಣ ಹಾನಿ ಆಗಿದೆ ಮತ್ತು 2026ನೇ ಸಾಲಿನಲ್ಲಿ ಇದುವರೆಗೂ 4259 ಜನರಿಗೆ ಹಾವು ಕಡಿದಿದ್ದು 43 ಜನರು ಪ್ರಾಣ ಕಳೆದುಕೊಂಡಿದ್ದಾರೆ ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ಸತೀಶ್ ಕುಮಾರ್ ತಿಳಿಸಿದರು.




ನಗರದ ಜನಪ್ರಿಯ ಕಾಲೇಜಿನ ಆವರಣದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಹಾಸನ ಹಾಗೂ ಜನಪ್ರಿಯ ನರ್ಸಿಂಗ್, ಪ್ಯಾರಾ ಮೆಡಿಕಲ್ ಮತ್ತು ಅಲೈಡ್ ಸೈನ್ಸ್ ಕಾಲೇಜುಗಳ ಸಹಯೋಗದೊಂದಿಗೆ ಅಂತರ ರಾಷ್ಟ್ರೀಯ ಹಾವು ಕಡಿತು ಜಾಗೃತಿ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿ, ಹಾವು ಕಡಿಯುವ ಮೊದಲೇ ಜಾಗೃತಿಯಿಂದ ನಾವೆಲ್ಲರೂ ಇರಬೇಕೆಂದು ಕಿವಿಮಾತು ಹೇಳಿದರು.

ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಡಾ. ಜಗದೀಶ್ ಅವರು ಮಾತನಾಡಿ, ಹಾವು ಕಡಿದಾಗ ರೋಗಿಯನ್ನು ಮಾನಸಿಕವಾಗಿ ಧೈರ್ಯವಾಗಿರಿಸಿ ಮತ್ತು ಗಾಬರಿಯಾಗದಂತೆ ನೋಡಿಕೊಳ್ಳಿ. ಏಕೆಂದರೆ ಭಯದಿಂದ ರಕ್ತದೊತ್ತಡ ಹೆಚ್ಚಾಗಿ ವಿಷವು ದೇಹದಲ್ಲಿ ವೇಗವಾಗಿ ಹರಡುತ್ತದೆ. ಸ್ಥಳದಲ್ಲಿಯೇ ವಿಶ್ರಮಿಸಿ ಕಚ್ಚಿದ ಭಾಗವನ್ನು ಅತಿಯಾಗಿ ಚಲಿಸದೆ, ಹೃದಯದ ಮಟ್ಟಕ್ಕಿಂತ ಕೆಳಗೆ ಅಥವಾ ನೇರವಾಗಿ ಇರಿಸಿ. ಬಟ್ಟೆ, ಉಂಗುರ ಅಥವಾ ವಾಚ್ ಇದ್ದರೆ ತಕ್ಷಣ ತೆಗೆದುಹಾಕಿ, ಯಾವುದೇ ವಿಳಂಬ ಮಾಡದೆ ಹತ್ತಿರದ ಆಸ್ಪತ್ರೆಗೆ, ಅದರಲ್ಲೂ ವಿಶೇಷವಾಗಿ ಆಂಟಿವೆನಮ್ ಲಭ್ಯವಿರುವ ವೈದ್ಯಕೀಯ ಕೇಂದ್ರಕ್ಕೆ ರೋಗಿಯನ್ನು ಕರೆದೊಯ್ಯಿರಿ ಎಂದು ಸಲಹೆ ನೀಡಿದರು.

ಹಾವು ಕಡಿದಾಗ ಬಾಯಿಯಿಂದ ವಿಷವನ್ನು ಹೀರಲು ಪ್ರಯತ್ನಿಸಬೇಡಿ, ಇದು ಅಪಾಯಕಾರಿ. ಗಾಯವನ್ನು ಕಚ್ಚಿದ ಜಾಗದಲ್ಲಿ ಬ್ಲೇಡ್‌ನಿಂದ ಕಟ್ ಮಾಡುವುದು ಅಥವಾ ರಕ್ತವನ್ನು ಹೊರಹಾಕಲು ಪ್ರಯತ್ನಿಸುವುದು ಸೋಂಕಿಗೆ ದಾರಿ ಮಾಡಿಕೊಡುತ್ತದೆ. ಅತಿಯಾಗಿ ಬಿಗಿಯಾಗಿ ರಕ್ತ ಸಂಚಾರ ಸಂಪೂರ್ಣವಾಗಿ ನಿಲ್ಲುವಂತೆ ಹಾವಿನ ಕಡಿತದ ಮೇಲ್ಭಾಗದಲ್ಲಿ ಬಟ್ಟೆ ಅಥವಾ ಹಗ್ಗದಿಂದ ತುಂಬಾ ಬಿಗಿಯಾಗಿ ಕಟ್ಟಬೇಡಿ. ಇದು ಅಂಗಾಂಶಗಳಿಗೆ ಹಾನಿ ಮಾಡಬಹುದು ಎಂದು ಅವರು ತಿಳಿಸಿದರು.

ದೇಶಿ ಮದ್ದುಗಳು ಮಂತ್ರವಾದಿಗಳು, ನಾಟಿ ವೈದ್ಯರ ಬಳಿ ಹೋಗಿ ಅಮೂಲ್ಯ ಸಮಯವನ್ನು ವ್ಯರ್ಥ ಮಾಡಬೇಡಿ. ಆಧುನಿಕ ವೈದ್ಯಕೀಯ ಚಿಕಿತ್ಸೆ ಮತ್ತು ಹಾವಿನ ಪ್ರತಿವಿಷ ಮಾತ್ರ ಜೀವ ಉಳಿಸಬಲ್ಲದು ಎಂದು ಸವಿಸ್ತಾರವಾಗಿ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಿದರು.

ಜನಪ್ರಿಯ ಫೌಂಡೇಶನ್ ಮತ್ತು ಚಾರಿಟಬಲ್ ಟ್ರಸ್ಟ್ ಮುಖ್ಯಸ್ಥ ಡಾ.ಎ.ಕೆ.ಅಬ್ದುಲ್ ಬಷೀರ್ ಅವರು ಮಾತನಾಡಿ, ಜನರು ಹಾವುಗಳನ್ನು ಕೊಲ್ಲುವ ಬದಲು ಸುರಕ್ಷಿತ ಹಾವು ರಕ್ಷಣಾ ಅಭ್ಯಾಸಗಳನ್ನು ಬೆಂಬಲಿಸಬೇಕು. ಹೆಚ್ಚಿನ ಕಡಿತಗಳು ರಾತ್ರಿಯಲ್ಲಿ, ಕೃಷಿ ಸಮಯದಲ್ಲಿ ಅಥವಾ ಮಳೆಗಾಲದಲ್ಲಿ ಸಂಭವಿಸುತ್ತವೆ, ಆದ್ದರಿಂದ ಜನರು ಹೆಚ್ಚುವರಿ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳಬೇಕು. ಹಾವುಗಳು ಹೆಚ್ಚಾಗಿ ಹೊಲಗಳು, ಮರಗಳ ರಾಶಿಗಳು, ಬೂಟುಗಳು, ಬಂಡೆಗಳ ಕೆಳಗೆ ಮತ್ತು ನೀರಿನ ಮೂಲಗಳ ಬಳಿ ಅಡಗಿ ಕೊಳ್ಳುತ್ತವೆ. ಆದ್ದರಿಂದ, ಅಂತಹ ಸ್ಥಳಗಳಲ್ಲಿ ಕೆಲಸ ಮಾಡುವಾಗ ಒಬ್ಬರು ಜಾಗರೂಕರಾಗಿರಬೇಕು ಮತ್ತು ಜಾಗರೂಕರಾಗಿರಬೇಕು ಎಂದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲ ಡಾ.ಪ್ರವೀಣ್ ಕುಮಾರ್, ಕ್ಷೇತ್ರ ಆರೋಗ್ಯಕ್ಷಣಾಧಿಕಾರಿ ಸತೀಶ್, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಯತೀಶ್, ಹರ್ಷ ಮತ್ತು ಜನಪ್ರಿಯ ಕಾಲೇಜಿನ ಅಧ್ಯಾಪಕ ವೃಂದದವರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.


# ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ,ಹಾಸನ

ಸಂಖ್ಯೆ ಪ್ರಾಸಾಅ/ಹಾ/ಹರಾಜು/2026-26 ದಿನಾಂಕ:19-09-2026

## ಸಾರ್ವಜನಿಕ ಬಹಿರಂಗ ಹರಾಜು ಪ್ರಕಟಣೆ

ಸಾರ್ವಜನಿಕರಿಗೆ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಕಂಡ ಮೋಟಾರು ವಾಹನಗಳನ್ನು ತನಿಖಾ ಸಿಬ್ಬಂದಿಯವರು ತನಿಖೆಗೆ ಒಳಪಡಿಸಿದಾಗ ತೆರಿಗೆ ಪಾವತಿಸದೆ ಪುರಾವೆಗಳನ್ನು ಹಾಗೂ ಇನ್ನಿತರ ಮೂಲ ದಾಖಲಾತಿಗಳನ್ನು ಹಾಜರುಪಡಿಸದೇ ಇರುವ ಕಾರಣ ಸದರಿ ವಾಹನಗಳನ್ನು ಮುಟ್ಟುಗೋಲು ಹಾಕಿಕೊಂಡು ಸುರಕ್ಷತೆಗಾಗಿ ಕಛೇರಿ ಆವರಣ ಹಾಗೂ ಪೊಲೀಸ್ ಠಾಣೆಯ ಆವರಣದಲ್ಲಿ ನಿಲುಗಡೆ ಮಾಡಲಾಗಿದೆ. ಮಾಲೀಕರಾಗಲೀ ಅಥವಾ ಹಣಕಾಸು ನೆರವುದಾರರಾಗಲೀ ಈ ಕಛೇರಿಗೆ ಹಾಜರಾಗಿ ವಾಹನಗಳನ್ನು ಬಿಡುಗಡೆ ಮಾಡಿಕೊಳ್ಳಲು ಮುಂದೆ ಬಂದಿರುವುದಿಲ್ಲ. ಆದುದದರಿಂದ ಈ ಕೆಳಕಂಡ ವಾಹನಗಳನ್ನು ಬಹಿರಂಗ ಹರಾಜು ಮಾಡಿ ವಿಲೇವಾರಿ ಮಾಡಲು ಈ ಪ್ರಕಟಣೆ ನೀಡಲಾಗಿದೆ.

ಹರಾಜು ನಡೆಯುವ ಸ್ಥಳ: ಪಾದೇಶಿಕ ಸಾರಿಗೆ ಕಛೇರಿ,
ಹಾಸನ ದಿನಾಂಕ 07-10-2026 ಪೂರ್ವಾಹ್ನ 11.00 ಗಂಟೆಗೆ

| ಕ್ರಸಂ | ವಾಹನ ಸಂಖ್ಯೆ | ವಾಹನ ವರ್ಗ | ವಾಹನ ನಿಲುಗಡೆ ಸ್ಥಳ |
|---|---|---|---|
| 1 | KA13A5475 | A/R CAB | RTO HASSAN |
| 2 | KA06D8187 | A/R CAB | RTO HASSAN |
| 3 | KA137627 | A/R CAB | RTO HASSAN |
| 4 | KA05AC0472 | A/R CAB | RTO HASSAN |
| 5 | KA09AB1836 | A/R CAB | RTO HASSAN |
| 6 | KA464029 | A/R CAB | RTO HASSAN |
| 7 | KA43J9306 | M/CYCLE | RTO HASSAN |
| 8 | KA09B5782 | LGV | RTO HASSAN |
| 9 | KA13A7402 | LGV | RTO HASSAN |
| 10 | KA01AB6915 | L/TAXI | RTO HASSAN |
| 11 | KA09D0014 | L/TAXI | RTO HASSAN |
| 12 | KA01AD2016 | L/TAXI | RTO HASSAN |
| 13 | KA13B2422 | L/TAXI | RTO HASSAN |
| 14 | KA51D4391 | MAXICAB | RTO HASSAN |
| 15 | KA13B1281 | M/CAB | GANDASI PS |
| 16 | KA15A0581 | MAXICBA | PSI ARSIKERE |
| 17 | KA42A2386 | MAXICAB | RTO HASSAN |
| 18 | KA073030 | MAXICAB | RTO HASSAN |
| 19 | KA13A9545 | MAXICAB | RTO HASSAN |
| 20 | KA13B5272 | MAXICAB | RTO HASSAN |
| 21 | KA356985 | MAXICAB | RTO HASSAN |
| 22 | MBJG38 EM5020121131116 | INNOVA | RTO HASSAN |
| 23 | DL04CAP2313 | LMV | RTO HASSAN |
| 24 | KA526319 | HPV | RTO HASSAN |
| 25 | KA20AC5978 | HPV | RTO HASSAN |
| 26 | KA44 4790 | LPV | RTO HASSAN |
| 27 | KA552566 | HPV | RTO HASSAN |
| 28 | KA35B2742 | HGV | RTO HASSAN |
| 29 | KA40A3470 | LCV | RTO HASSAN |
| 30 | UPI6AF5627 | LMV | RTO HASSAN |
| 31 | KA53A5867 | MPV | RTO HASSAN |

ವಿ.ಸೂಚನೆ:- ಬಹಿರಂಗ ಹರಾಜಿನ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಕಛೇರಿಯ ನೋಟೀಸ್ ಫಲಕದಲ್ಲಿ ವೀಕ್ಷಿಸಬಹುದಾಗಿದೆ.

ಪ್ರಾದೇಶಿಕ ಸಾರಿಗೆ ಅಧಿಕಾರಿ (ಪ್ರಭಾರ) ಹಾಸನ

# ಪದ ವ್ಯತ್ಯಾಸ: ದೊಡ್ಡ ಸಮಸ್ಯೆಯಾಗಿ ಬಿಂಬಿಸದಿರಿ

## ಲಂಚ ಕೊಡಿ ಎಂಬರ್ಥದಲ್ಲಿ ಹೇಳಿಲ್ಲ: ಸಚಿವ ಕೆ.ಎಂ.ಶಿವಲಿಂಗೇಗೌಡ ಮತ್ತೊಮ್ಮೆ ಸ್ಪಷ್ಟನೆ

• ಪ್ರಜೋದಯ ವರದಿ



**ಬೆಂಗಳೂರು:** ನನ್ನದು ಗ್ರಾಮೀಣ ಭಾಷೆ. ಆಡು ಭಾಷೆಯಲ್ಲಿ ಮಾತನಾಡುವ ಸಂದರ್ಭ ಪದ ಬಳಕೆಯ ವ್ಯತ್ಯಾಸವಾಗಿರಬಹುದು. ಗೌರವ ಕೊಡಿ ಎಂದಿದ್ದು ಲಂಚ ಕೊಡಿ ಎಂಬರ್ಥ ದಲ್ಲಿ ಹೇಳಿಲ್ಲ. ಒಂದು ಪದ ವ್ಯತ್ಯಾಸವಾಗಿದ್ದನ್ನೇ ದೊಡ್ಡ ಸಮಸ್ಯೆಯನ್ನಾಗಿ ಬಿಂಬಿಸಬಾರದು ಎಂದು ಅಬಕಾರಿ ಸಚಿವರು ಕೆ.ಎಂ. ಶಿವಲಿಂಗೇಗೌಡ ಅವರು ಸ್ಪಷ್ಟಪಡಿಸಿದರು.

ಬುಧವಾರ ವಿಕಾಸಸೌಧದ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಅವರು, ಪದ ವಿವಾದದ ಕುರಿತು ಸಮರ್ಥನೆ ಮಾಡಿಕೊಳ್ಳುತ್ತಿಲ್ಲ, ಉಚ್ಚಾರಣೆಯಲ್ಲಿ ತಪ್ಪಾಗಿದ್ದನ್ನು ಬೆಳೆಸಿಕೊಂಡು ಹೋಗಬಾರದು. ನನ್ನ ವ್ಯಾಖ್ಯಾನದಲ್ಲಿ ಸಹಾಯ ಮಾಡಿದವರಿಗೆ ಧನ್ಯವಾದ ಹೇಳುವುದು ನಮ್ಮ ಧರ್ಮ ಎಂಬುದಾಗಿತ್ತು. ಅದರಿಂದ ಫಲಾನುಭವಿ ಹಾಗು ಅಧಿಕಾರಿಗಳ ನಡುವಣ ಸಂಘರ್ಷ ಇತ್ಯರ್ಥಗೊಳ್ಳುತ್ತದೆಂಬ ಆಶಾಭಾವನೆಯಲ್ಲಿ ನಾನು ಹಾಗೆ ಹೇಳಿದ್ದಾಗಿತ್ತು ಎಂದರು.

**ಅಧಿಕಾರಿಗಳ ವಿರುದ್ಧ ಕ್ರಮ**

ಸಕಲೇಶಪುರ ತಾಲ್ಲೂಕಿನಲ್ಲಿ ನಡೆದ ಪ್ರಜಾಸೇವಾ ಆಂದೋಲನ ಕಾರ್ಯಕ್ರಮದಲ್ಲಿ ಕೆಲವು ಅಧಿಕಾರಿಗಳು ಲಂಚ ಸ್ವೀಕರಿಸಿರುವುದಾಗಿ ಸ್ಥಳೀಯರು ದೂರಿದ್ದಾರೆ. ಅಂತಹ ಆರೋಪ ಹೊತ್ತಿರುವ ಅಧಿಕಾರಿಗಳ ವಿರುದ್ಧ ತನಿಖೆ ನಡೆಸಿ, ಎರಡು ತಿಂಗಳಲ್ಲಿ ಕ್ರಮ ವಹಿಸಲಾಗುವುದೆಂದು ಸ್ಪಷ್ಟಪಡಿಸಿದರು.

ಸಕಲೇಶಪುರದಲ್ಲಿ ಬೆಳಿಗ್ಗೆ 10 ಗಂಟೆಯಿಂದ ಸಂಜೆ 8 ಗಂಟೆವರೆಗೆ ಬಿಡುವಿಲ್ಲದೆ ನಿರಂತರವಾಗಿ ಸ್ಥಳೀಯರ ಸಮಸ್ಯೆಗಳನ್ನು ಆಲಿಸಿದ್ದೇನೆ. ಒಂದು ಬದಿಯಲ್ಲಿ ಸಮಸ್ಯೆ ತಂದವರನ್ನು, ಮತ್ತೊಂದು ಬದಿಯಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ನಿಲ್ಲಿಸಿಕೊಂಡು ಇಬ್ಬರ ವಾದಗಳನ್ನು ಆಲಿಸಿದ್ದೇನೆ. ಸರ್ಕಾರದ ಯೋಜನೆ ಫಲಾನುಭವಿಗೆ ಸರಿಯಾಗಿ ತಲುಪುವ ನಿಟ್ಟಿನಲ್ಲಿ ಸಲಹೆಗಳನ್ನು ನೀಡಿದ್ದೇನೆ. ಎಷ್ಟು ದಿನಗಳಲ್ಲಿ ಸಮಸ್ಯೆ ಬಗೆಹರಿಸಿಕೊಡುತ್ತೀರಿ ಎಂಬುದನ್ನು ಅಧಿಕಾರಿಗಳನ್ನು ಸ್ಥಳದಲ್ಲಿಯೇ ಕೇಳಿ, ನಿಗದಿತ ಸಮಯವನ್ನು ದಾಖಲಿಸಿಕೊಂಡಿದ್ದೇನೆ. ನಿಗದಿತ ಸಮಯದಲ್ಲಿ ಇತ್ಯರ್ಥ ಪಡಿಸಿಕೊಡದಿದ್ದರೆ ಕ್ರಮ ಕೈಗೊಳ್ಳುವುದಾಗಿಯೂ ಎಚ್ಚರಿಕೆ ನೀಡಿದ್ದೇನೆ. ಹೀಗೆ ಸುಮಾರು 400ಕ್ಕೂ ಹೆಚ್ಚು ಮಂದಿಯ ಕುಂದು ಕೊರತೆಗಳನ್ನು ಖುದ್ದಾಗಿ ಆಲಿಸಿ, ಬಗೆಹರಿಸುವ ನಿಟ್ಟಿನಲ್ಲಿ ಪ್ರಯತ್ನಿಸಿದ್ದೇನೆ. ವಿಧಾನಸೌಧದಲ್ಲಿ ನಡೆಯುವ ಪ್ರಶ್ನೋತ್ತರ ಮಾದರಿಯಲ್ಲಿ ನಡೆಸಿದ ಆಂದೋಲನದ ಬಗ್ಗೆ ಸ್ಥಳೀಯರಿಂದ ಭಾರಿ ಮುಚ್ಚುಗೆ ವ್ಯಕ್ತವಾಗಿದೆ. ಆದರೆ, ವಿರೋಧ ಪಕ್ಷಗಳ ಕೆಲವರು ನನ್ನ ಒಂದು ಪದ ಬಳಕೆಯನ್ನೇ ಪ್ರಧಾನವಾಗಿಸಿ ನನ್ನ ಶ್ರಮವನ್ನೇ ಹಾಳುಗೆಡವಲು ಪ್ರಯತ್ನಿಸುತ್ತಿದ್ದಾರೆಂದು ಹೇಳಿದರು.

ಅರಸೀಕೆರೆಯಲ್ಲಿ ಸ್ಥಳೀಯರ ಕುಂದುಕೊರತೆಗಳನ್ನು ಆಲಿಸಿ,ಬಗೆಹರಿಸುವ ಕೆಲಸವನ್ನು ಮೊದಲಿನಿಂದಲೂ ಮಾಡುತ್ತ ಬಂದಿದ್ದೇನೆ. ಅದೇ ಮಾದರಿಯಲ್ಲಿ ಹಾಸನದ ಉಸ್ತುವಾರಿ ಸಚಿವರಾದ ಮೇಲೆ ಮೊದಲ ಬಾರಿಗೆ ಸಕಲೇಶ ಪುರದಲ್ಲೂ ನಡೆಸಿದೆ. ಕಾರ್ಯಕ್ರಮ ಯಶಸ್ವಿ ಯಾದ ತೃಪ್ತಿ ನನಗಿದೆ. ಆದರೆ, ಒಂದು ಪದ ಬಳಕೆಯನ್ನು ವಿವಾದಕ್ಕೆ ಬಳಸಲಾಯಿತಲ್ಲ ಎಂಬ ವ್ಯಥೆಯೂ ಇದೆ. ಹೃದಯದ ಭಾರವನ್ನು ಇಳಿಸಿಕೊಳ್ಳಲು ಈ ಮಾತುಗಳನ್ನು ಹೇಳುತ್ತಿದ್ದೇನೆ. ನನ್ನ ರಾಜಕೀಯ ಜೀವನದಲ್ಲಿ ಒಂದೇ ಒಂದು ಕಪ್ಪುಚುಕ್ಕಿಯಿಲ್ಲ, ಅತ್ಯಂತ ಪ್ರಾಮಾಣಿಕವಾಗಿ ನಡೆದುಕೊಂಡು ಬಂದಿದ್ದೇನೆ ಎಂದರು.

ಪ್ರಜಾಸೇವಾ ಕಾರ್ಯಕ್ರಮದ ನಡುವೆ ಒಂದು ಗುಂಪು ಒಟ್ಟಾಗಿ ಬಂದು ಸರ್ವೆ ಇಲಾಖೆಯಲ್ಲಿ 2 ಲಕ್ಷದವರೆಗೆ ಲಂಚ ತೆಗೆದುಕೊಳ್ಳುತ್ತಿರುವುದಾಗಿ ಆರೋಪಿಸಿದರು. ಈ ಸಂದರ್ಭ ಜಿಲ್ಲಾ ಮಂತ್ರಿ ನೇತೃತ್ವದಲ್ಲಿ ಪ್ರಜಾಸೇವಾ ಇಲಾಖೆಯಡಿ ಅದಾಲತ್ ನಡೆಸಿ ಅಧಿಕಾರಿಗಳನ್ನು ಹಾಗು ಫಲಾನುಭವಿಗಳನ್ನು ವೈಯಕ್ತಿಕವಾಗಿ ಕರೆಸಿ ಚರ್ಚಿಸಿ ಸಮಸ್ಯೆ ಬಗೆಹರಿಸಿ ಎಂಬ ಸಲಹೆ ನೀಡಿದ್ದೇನೆ. 2 ಲಕ್ಷ ಲಂಚ ಕೊಟ್ಟಿದ್ದೇನೆಂಬ ವ್ಯಕ್ತಿಯ ಸಮಸ್ಯೆಯನ್ನು ಸರಿಯಾಗಿ ಕೇಳುವಂತೆ ಜಿಲ್ಲಾಧಿಕಾರಿಗೆ ಸ್ಥಳದಲ್ಲೇ ಹೇಳಿದೆ ಎಂದು ವಿವರಿಸಿದರು.

ಅಧಿಕಾರಿಗಳು ಹಾಗು ಫಲಾನುಭವಿಗಳ ನಡುವೆ ಸಂಘರ್ಷ ಬೇಡ. ಕೆಲಸ ಮಾಡಿಕೊಟ್ಟ ಮೇಲೆ ಅಧಿಕಾರಿಗಳಿಗೆ ಗೌರವ ಸಲ್ಲಿಸಿ, ಅದು ನಮ್ಮ ಧರ್ಮ. ನಮ್ಮ ಕೆಲಸವನ್ನು ಮಾಡಿಕೊಟ್ಟವರಿಗೆ ಗೌರವ ಕೊಡುವುದು ಸನ್ನಡತೆ ಎಂದಿದ್ದೆ. ಆಗ ಗೌರವ ನೀಡಿ ಎಂದರೆ ಲಂಚ ಕೊಡಬೇಕೆ ಎಂದು ಕೆಲವರು ಗಲಾಟೆ ಮಾಡಿದರು. ಆಗ ಯಾರೂ ಕೂಡ ಒಂದು ರೂಪಾಯಿ ಲಂಚ ಕೊಡಬಾರದು. ಈಗಾಗಲೇ ಲಂಚದ ರೂಪದಲ್ಲಿ ಕೊಟ್ಟಿರುವ ಹಣವನ್ನು ಅಧಿಕಾರಿಗ ಳಿಂದ ವಾಪಾಸ್ ಕೊಡಿಸುವ ನಿಟ್ಟಿನಲ್ಲಿ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದಿದ್ದೇನೆಂದು ಸ್ಪಷ್ಟಪಡಿಸಿದರು.

### ಡಿಸಿ ನೇತೃತ್ವದಲ್ಲಿ ಡ್ಯಾಶ್ ಬೋರ್ಡ್ ಸ್ಥಾಪನೆ

ರಾಜ್ಯದಲ್ಲೇ ಮೊದಲ ಬಾರಿಗೆ ಜಿಲ್ಲಾಧಿಕಾರಿ ನೇತೃತ್ವದಲ್ಲಿ ಹಾಸನದಲ್ಲಿ ಕುಂದುಕೊರತೆಗಳ ಪರಿಹಾರ ಪ್ರಕ್ರಿಯೆಗೆ ಸಂಬಂಧಿಸಿದ ಡ್ಯಾಶ್ ಬೋರ್ಡ್ ಸ್ಥಾಪಿಸಲಾಗುವುದು. ಅದರಲ್ಲಿ ದಾಖಲಾದ ಜನರ ಸಮಸ್ಯೆಗಳು, ಪರಿಹರಿಸುವ ನಿಟ್ಟಿನಲ್ಲಿ ಅಧಿಕಾರಿಗಳು ತೆಗೆದುಕೊಂಡ ಸಮಯಾವಕಾಶ ಮತ್ತು ಅದು ಯಾವ ಹಂತದಲ್ಲಿದೆ ಎಂಬ ವಿವರಗಳು ಅದರಲ್ಲಿ ಲಭ್ಯವಿರಲಿದೆ ಎಂದು ಮಾಹಿತಿ ನೀಡಿದರು.

# ಹಿಂದೂ ಮಹಾಗಣಪತಿ ವಿಸರ್ಜನಾ ಮಹೋತ್ಸವ

» ಮೊದಲನೇ ಪುಟದಿಂದ

ಮೆರವಣಿಗೆಗೆ ಚಾಲನೆ ನೀಡಲಾಯಿತು.

**ಕುಣಿದು ಕುಪ್ಪಳಿಸಿದ ಯುವಕ-ಯುವತಿಯರು**

ಹಿಂದೂ ಮಹಾಗಣಪತಿ ಮೂರ್ತಿ ವಿಸರ್ಜನಾ ಮಹೋತ್ಸವ ಅಂಗವಾಗಿ ನಾಲ್ಕು ಡಿ.ಜೆ. ಅಳವಡಿಸಲಾಗಿತ್ತು. ಬಸವೇಶ್ವರ ದೇವಸ್ಥಾನ ಸಮೀಪದ ಕನ್ವೆನ್ಷನ್ ಹಾಲ್, ಡಬಲ್ ಟ್ಯಾಂಕರ್ ರಸ್ತೆ ಹಾಗು ಮೆರವಣಿಗೆಯಲ್ಲಿ ಎರಡು ಸೇರಿ ನಾಲ್ಕು ಡಿ.ಜೆ.ಗೆ ಅವಕಾಶ ಮಾಡಿಕೊಡಲಾಗಿತ್ತು. ಒಂದು ಡಿ.ಜೆ.ಬಳಿ ಯುವಕರು ಮತ್ತೊಂದರ ಬಳಿ ಯುವತಿಯರು ಹೆಜ್ಜೆ ಹಾಕುತ್ತಾ ಸಾಗಿದರು. ಮಹಿಳೆಯರ ಭದ್ರತೆ ಹಿತದೃಷ್ಟಿಯಿಂದ ಸುತ್ತಲೂ ಹಗ್ಗ ಕಟ್ಟಿ ಸರದಿ ಸಾಲು ಸಾಗುತ್ತಿತ್ತು. ಮಾಜಿ ಶಾಸಕ ಪ್ರೀತಮ್ ಜೆ. ಗೌಡ ಅವರು ಯುವಕರೊಂದಿಗೆ ನೃತ್ಯ ಮಾಡುತ್ತಾ ಹುರಿದುಂಬಿಸಿದರು.

ಸಹ್ಯಾದ್ರಿ ವೃತ್ತ, ಬಸವೇಶ್ವರ ಕಲ್ಯಾಣ ಮಂಟಪ ರಸ್ತೆ, ಹೊಸಲೈನ್ ರಸ್ತೆ, ಹಾಸನಾಂಬ ದೇವಾಲಯ, ಸುಭಾಷ್ ವೃತ್ತ, ಹೇಮಾವತಿ ಪ್ರತಿಮೆ ಮಾರ್ಗವಾಗಿ ದೇವಿಗೆರೆ ತಲುಪಿದ ಗಣೇಶ ಮೂರ್ತಿಯನ್ನು ರಾತ್ರಿ 9ರ ಸುಮಾರಿಗೆ ದೇವಿಗೆರೆಯಲ್ಲಿ ವಿಸರ್ಜಿಸಲಾಯಿತು.

**ಮಸೀದಿ ಸುತ್ತ ಪೊಲೀಸ್ ಸರ್ಪಗಾವಲು**

ಯಾವುದೇ ಅಹಿತಕರ ಘಟನೆ ನಡೆಯದಂತೆ ನಗರದಾದ್ಯಂತ ಪೊಲೀಸ್ ಸರ್ಪಗಾವಲು ಹಾಕಲಾಗಿತ್ತು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭಾನ್ವಿತಾ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿಧಿ ಸೇರಿ ಚಾಮರಾಜನಗರ, ಮಂಡ್ಯ ಜಿಲ್ಲೆ ಸೇರಿ 600 ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ಮಸೀದಿ ಮುಂಭಾಗ ಹೆಚ್ಚಿನ ಭದ್ರತೆಗಾಗಿ ಮೂರು ಪೊಲೀಸ್ ವಾಹನಗಳನ್ನು ನಿಲ್ಲಿಸಲಾಗಿತ್ತು. ಮೆರವಣಿಗೆ ಸಂದರ್ಭದಲ್ಲಿ ರಸ್ತೆಯುದ್ದಕ್ಕೂ ಅಂಗಡಿ ಮುಂಗಟ್ಟುಗಳನ್ನು ಬಂದ್ ಮಾಡಲಾಗಿತ್ತು. ಹೆಜ್ಜೆ ಹೆಜ್ಜೆಗೂ ನಿಂತಿದ್ದ ಪೊಲೀಸರು ಶಾಂತಿಯುತ ಮೆರವಣಿಗೆಗೆ ಅನುವು ಮಾಡಿಕೊಟ್ಟರು.

**ಸೌಹಾರ್ದತೆ ಮೆರೆದ ಮುಸ್ಲಿಮರು**

ಹೊಸಲೈನ್ ರಸ್ತೆಯಲ್ಲಿ ಗಣೇಶ ಮೆರವಣಿಗೆ ಬರುವ ಮಾರ್ಗದಲ್ಲಿ ಮುಸ್ಲಿಂ ವ್ಯಾಪಾರಿಗಳು ಅಂಗಡಿ ಮುಂಗಟ್ಟುಗಳನ್ನು ಬಂದ್ ಮಾಡಿ ರಸ್ತೆಗೆ ನೀರುಸುರಿದು ಸ್ವಚ್ಛಗೊಳಿಸಿ, ರಂಗೋಲಿ ಬಿಡಿಸಿದ್ದರು. ಮುಸ್ಲಿಂ ವ್ಯಕ್ತಿಯೊಬ್ಬರು ಗಣೇಶ ಮೂರ್ತಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಸಹಬಾಳ್ವೆಯ ಸಂದೇಶ ಸಾರಿದರು. ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ನಗರಸಭೆ ಮಾಜಿ ಅಧ್ಯಕ್ಷ ಆರ್.ಮೋಹನ್ ಸೇರಿ ಆರ್‌ಎಸ್‌ಎಸ್ ಮುಖಂಡರು ಪಾಲ್ಗೊಂಡಿದ್ದರು.

### ಮೆರವಣಿಗೆಯ ತಳ್ಳಾಟದಲ್ಲಿ ಯುವಕನಿಗೆ ಗಾಯ

ಹಾಸನ: ಹಿಂದೂ ಮಹಾಗಣಪತಿ ವಿಸರ್ಜನಾ ಮೆರವಣಿಗೆ ವೇಳೆ ಯುವಕನೊಬ್ಬ ಗಂಭೀರ ಗಾಯಗೊಂಡಿರುವ ಘಟನೆ ನಡೆದಿದೆ.

ಹೊಸ ಲೈನ್ ರಸ್ತೆಯ ಮಸೀದಿ ಮುಂಭಾಗ ಹಿಂದೂಪರ ಕಾರ್ಯಕರ್ತರು ಕರ್ಪೂರ ಹಚ್ಚಲು ಮುಂದಾಗುತ್ತಿದ್ದಂತೆ ಪೊಲೀಸರು ತಡೆಯಲು ಬಂದರು. ಆಗ ಯುವಕರು ಹಾಗು ಪೊಲೀಸರ ನಡುವೆ ಮಾತಿನ ಚಕಮಕಿ ಏರ್ಪಟ್ಟಿತು. ಕ್ಷಣಾರ್ಧದಲ್ಲಿ ಶುರುವಾದ ನೂಕಾಟದಿಂದ ಯುವಕನೊಬ್ಬ ಕೆಳಗೆ ಬಿದ್ದ. ಆತನ ಮೇಲೆ ಮತ್ತೆ ನಾಲ್ಕೈದು ಜನರು ಬಿದ್ದಿದ್ದರಿಂದ ಆತನ ಮೂಗಿನಿಂದ ರಕ್ತ ಸ್ರಾವವಾಗತೊಡಗಿತು. ತಕ್ಷಣ ಯುವಕನನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು. ಪೊಲೀಸರೇ ಮೆರವಣಿಗೆಗೆ ಅಡ್ಡಿಪಡಿಸುತ್ತಿದ್ದಾರೆಂದು ಯುವಕರು ವಾಗ್ವಾದ ಶುರು ಮಾಡಿದರು. ಶಾಂತಿಯುತ ಸಂಭ್ರಮಾಚರಣೆಗೆ ಅವಕಾಶ ಮಾಡಿಕೊಡುತ್ತಿಲ್ಲ. ಮಹಿಳೆಯರೊಂದಿಗೂ ಅಸಭ್ಯವಾಗಿ ವರ್ತಿಸುತ್ತಿದ್ದಾರೆಂದು ಆಕ್ರೋಶ ವ್ಯಕ್ತಪಡಿಸಿದರು. ಸ್ವಲ್ಪ ದೂರದಲ್ಲೇ ಇದ್ದ ಜಿಲ್ಲಾ ಪೊಲೀಸ್ ವರಿಷ್ಟಾಧಿಕಾರಿ ಶುಭನ್ವಿತಾ ಅವರು ಸ್ಥಳಕ್ಕಾಗಮಿಸಿ ಪರಿಸ್ಥಿತಿ ತಿಳಿಗೊಳಿಸಿದರು.

ಡಿ.ಜೆ. ಅಳವಡಿಕೆಗೆ ನಿರಾಕಾರ:

ಡಬಲ್ ಟ್ಯಾಂಕ್ ವೃತ್ತದಲ್ಲಿ ಡಿ.ಜೆ. ಅಳವಡಿಸಲು ಪೊಲೀಸರು ನಿರಾಕರಿಸಿದ್ದರಿಂದ ಹಿಂದೂಪರ ಕಾರ್ಯಕರ್ತರು ಹಾಗು ಪೊಲೀಸರ ನಡುವೆ ವಾಗ್ವಾದ ನಡೆಯಿತು. ಪ್ರತಿವರ್ಷ ಇಲ್ಲಿಯೇ ಅನ್ನ ಸಂತರ್ಪಣೆ ಏರ್ಪಡಿಸುತ್ತೇವೆ. ಡಿ.ಜೆ. ಹಾಡು ಹಾಕುತ್ತೇವೆ. ಈ ವರ್ಷ ಹೊಸ ಕಾನೂನು ಏಕೆಂದು ಪ್ರಶ್ನಿಸಿದರು. ವಿಷಯ ತಿಳಿಯುತ್ತಿದ್ದಂತೆ ಮಾಜಿ ಶಾಸಕ ಪ್ರೀತಮ್ ಜೆ. ಗೌಡ ಅವರು ಭೇಟಿ ನೀಡಿ ಸಮಸ್ಯೆ ಆಲಿಸಿದರು. ಮುಖ್ಯ ರಸ್ತೆಯಿಂದ ಸ್ವಲ್ಪ ದೂರದಲ್ಲಿ ಡಿ.ಜೆ. ಅಳವಡಿಕೆಗೆ ಅವಕಾಶ ಕಲ್ಪಿಸಬೇಕೆಂದು ಪೊಲೀಸರಲ್ಲಿ ಮನವಿ ಮಾಡಿದರು. ಅದಕ್ಕೆ ಪೊಲೀಸರು ಸಮ್ಮತಿ ಸೂಚಿಸಿದ ಬಳಿಕ ಸಮಸ್ಯೆ ಬಗೆಹರಿಯಿತು.

# ಪೌರ ಕಾರ್ಮಿಕರಿಗೆ ಮನೆ ಕಟ್ಟಲು ಜಾಗ ಕೊಡಿ

» ಮೊದಲನೇ ಪುಟದಿಂದ

ಪೌರ ಕಾರ್ಮಿಕರ ಮುಖಂಡ ಹೆತ್ತೂರು ನಾಗರಾಜ್ ಅವರು ಮಾತನಾಡಿ, ಕಾರ್ಮಿಕರು ಆರೋಗ್ಯಕ್ಕೆ ಆದ್ಯತೆ ನೀಡಬೇಕು. ಸಮವಸ್ತ್ರ ಹಾಗು ಸುರಕ್ಷತಾ ಪರಿಕರಗಳನ್ನು ಕಡ್ಡಾಯವಾಗಿ ಬಳಸಬೇಕು. ಪೌರ ಕಾರ್ಮಿಕರಿಗೆ ಹಾಸನಾಂಬ ದೇವಿಯ ದರ್ಶನಕ್ಕೆ ಅವಕಾಶ ಕಲ್ಪಿಸಬೇಕು. ಆರೋಗ್ಯ ವಿಮೆ ಮಾಡಿಸಿಕೊಡಬೇಕೆಂದು ಮನವಿ ಮಾಡಿದರು.

ಸ್ವಾತಂತ್ರ್ಯೋತ್ಸವ ಹಾಗು ಗಣರಾಜ್ಯೋತ್ಸವ ಸಂದರ್ಭದಲ್ಲಿ ಕಡ್ಡಾಯವಾಗಿ ಇಬ್ಬರು ಪೌರ ಕಾರ್ಮಿಕರನ್ನು ಸನ್ಮಾನಿಸಬೇಕು. ಪೌರ ಕಾರ್ಮಿಕರಿಗೆ ವಸತಿ ವ್ಯವಸ್ಥೆ ಕಲ್ಪಿಸಬೇಕು. ಸಮಾಜವನ್ನು ಇನ್ನಷ್ಟು ಶಕ್ತಿಯುತವಾಗಿ ಕಟ್ಟುವಲ್ಲಿ ಪೌರ ಕಾರ್ಮಿಕರ ಪಾತ್ರ ಮಹತ್ವದ್ದಾಗಿದೆ. ಗುಂಪುಗಾರಿಕೆ ಬಿಟ್ಟು ಎಲ್ಲರೂ ಒಂದೇ ಎಂಬ ಭಾವನೆಯಿಂದ ಕೆಲಸ ಮಾಡಬೇಕೆಂದರು.

ಅಪರ ಜಿಲ್ಲಾಧಿಕಾರಿ ಕೃಷ್ಣಮೂರ್ತಿ ಕಾರ್ಯಕ್ರಮ ಉದ್ಘಾಟಿಸಿದರು. ಪಾಲಿಕೆ ಕಾರ್ಯಪಾಲಕ ಅಭಿಯಂತರ ಸತ್ಯನಾರಾಯಣ, ಸುನಿಲ್ ಆಡುವಳ್ಳಿ, ಸಿದ್ದಪ್ಪಾಜಿ, ಅಧಿಕಾರಿಗಳಾದ ತೇಜಸ್ವಿನಿ, ಸುಜಾತಾ, ಲತಾಕುಮಾರಿ ಮತ್ತಿತರರು ಉಪಸ್ಥಿತರಿದ್ದರು.

ಪ್ರತಿಭಾವಂತ ಪೌರ ಕಾರ್ಮಿಕರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಕಾರ್ಯಕ್ರಮಕ್ಕೂ ಮೊದಲು ಜಿಲ್ಲಾಧಿಕಾರಿ ಕಚೇರಿಯಿಂದ ಮೆರವಣಿಗೆ ನಡೆಸಲಾಯಿತು. ಅಂಬೇಡ್ಕರ್ ಪ್ರತಿಮೆಗೆ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಮಾಲಾರ್ಪಣೆ ಮಾಡಿದರು. ಅಂಬೇಡ್ಕರ್ ಹಾಗು ಡಾ. ಬಾಬು ಜಗಜೀವನ್ ರಾಮ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು. ಮೆರವಣಿಗೆಯುದ್ದಕ್ಕೂ ಪೌರ ಕಾರ್ಮಿಕರು ಕುಣಿದು ಕುಪ್ಪಳಿಸಿದರು.

## ಸರ್ಕಾರಕ್ಕೆ ಮಾಜಿ ಸಚಿವ ಹೆಚ್.ಕೆ.ಕುಮಾರಸ್ವಾಮಿ ಒತ್ತಾಯ

# ಆಲೂರು ತಾಲ್ಲೂಕು ತೀವ್ರ ಬರಪೀಡಿತ ಪಟ್ಟಿಗೆ ಸೇರಿಸಿ

• ಪ್ರಜೋದಯ ವರದಿ

**ಹಾಸನ:** ಆಲೂರು ತಾಲ್ಲೂಕನ್ನು ಕೂಡಲೇ ತೀವ್ರ ಬರಪೀಡಿತ ಪಟ್ಟಿಗೆ ಸೇರಿಸಬೇಕೆಂದು ಮಾಜಿ ಸಚಿವ ಹೆಚ್.ಕೆ.ಕುಮಾರಸ್ವಾಮಿ ಅವರು ಒತ್ತಾಯಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆಲೂರು ತಾಲ್ಲೂಕಿನಲ್ಲಿ ಮಳೆ ಕೊರತೆಯಿಂದ ರೈತರು ಸಂಕಷ್ಟಕ್ಕೆ ಸಿಲುಕುವ ಪರಿಸ್ಥಿತಿ ನಿರ್ಮಾಣವಾಗಿದೆ. ಪರಿಸ್ಥಿತಿ ಹೀಗಿದ್ದರೂ ಸಾಧಾರಣ ಬರ ಪಟ್ಟಿಗೆ ಸೇರಿಸಿರುವುದು ದುರಂತ. ಇದು ನಾಮ್ ಕಾ ವಾಸ್ತೆ ಪ್ರಕ್ರಿಯೆ. ಬೇಲೂರು ತಾಲ್ಲೂಕನ್ನು ತೀವ್ರ ಪಟ್ಟಿಗೆ ಸೇರಿಸಿರುವಂತೆ, ಆಲೂರು ತಾಲ್ಲೂಕನ್ನೂ ತೀವ್ರ ಬರಪಟ್ಟಿಗೆ ಸೇರಿಸಬೇಕೆಂದು ಆಗ್ರಹಿಸಿದರು.

ಆಲೂರಿನ ವಾಟೆಹೊಳೆ ಜಲಾಶಯ ತುಂಬಿದ್ದರೂ ಇನ್ನೂ ನಾಲೆಗಳಿಗೆ ನೀರು ಬಿಟ್ಟಿಲ್ಲ. ನೀರಾವರಿ ಸಲಹಾ ಸಮಿತಿ ಉದಾಸೀನ ತೋರದೆ, ನಾಲೆಗೆ ನೀರು ಹರಿಸಬೇಕು. ಇಲ್ಲವಾದರೆ ಪ್ರತಿಭಟನೆ ನಡೆಸಲಾಗುವುದೆಂದು ಎಚ್ಚರಿಕೆ ನೀಡಿದ ಅವರು, ಹೇಮಾವತಿ ಜಲಾಶಯದಿಂದ ನೀರು ಹರಿಸಿದ್ದರೂ, ಕಟ್ಟಾಯ ಹೋಬಳಿವರೆಗೆ ನೀರು ಹರಿದಿಲ್ಲ. ಆದರೆ, ನೇರವಾಗಿ ಕೆಆರ್‌ಎಸ್ ಜಲಾಶಯಕ್ಕೆ ನೀರು ಹರಿಯುತ್ತಿದೆ. ರಾಜ್ಯ ಸರ್ಕಾರ ನಮ್ಮ ನಾಡಿನ ರೈತರ ಹಿತ ಬಲಿಕೊಟ್ಟು ತಮಿಳುನಾಡಿನ ಹಿತ ಕಾಯಲಾಗುತ್ತಿದೆ ಎಂದು ಆರೋಪಿಸಿದರು.




ರಾಜ್ಯ ಸರ್ಕಾರ ತಮಿಳುನಾಡಿಗೆ ನೀರು ಹರಿಸುವ ಮೂಲಕ ಹೈಕಮಾಂಡ್ ಮೆಚ್ಚಿಸುವ ಕೆಲಸ ಮಾಡಲಾಗುತ್ತಿದೆ. ಹೀಗೆಯೇ ತಮಿಳುನಾಡಿಗೆ ನೀರು ಹರಿಸಿದರೆ ಮುಂದಿನ ಒಂದು ತಿಂಗಳಲ್ಲಿ ಜಲಾಶಯದ ನೀರು ಖಾಲಿಯಾಗಿ, ಕುಡಿಯುವ ನೀರಿಗೂ ತತ್ವಾರ ಉಂಟಾಗಿದೆ. ಕಟ್ಟಾಯ ಹೋಬಳಿಗೆ ನೀರು ಹರಿಸದಿದ್ದರೆ ಜಿಲ್ಲಾಧಿಕಾರಿ ಕಚೇರಿ ಎದುರು ಟೆಂಟ್ ಹಾಕಿಕೊಂಡು ಪ್ರತಿಭಟನೆ ನಡೆಸುವ ಎಚ್ಚರಿಕೆ ನೀಡಿದರು.

ಜಿಲ್ಲೆಯಲ್ಲಿ ಕುಡಿಯುವ ನೀರು ಹಾಗು ವಿದ್ಯುತ್ ಸಮಸ್ಯೆ ಹೆಚ್ಚಾಗುತ್ತಿದೆ. ಜಿಲ್ಲಾಧಿಕಾರಿ ಅವರ ಖಾತೆಯಲ್ಲಿ ಹಣ ಇದೆ ಎಂದಾದರೆ, ಹಣ ಏಕೆ ಬಿಡುಗಡೆ ಮಾಡುತ್ತಿಲ್ಲ. ಕಾಮಗಾರಿ ಏಕೆ ನಡೆಸುತ್ತಿಲ್ಲವೆಂದು ಪ್ರಶ್ನಿಸಿದ ಅವರು, ರಾಜ್ಯ ಸರ್ಕಾರದಲ್ಲಿ ತಾಳ ಮೇಳ ಇಲ್ಲದಂತಾಗಿದೆ. ಹಿರಿಯರಾದ ಹೆಚ್.ಕೆ.ಪಾಟೀಲ್ ಅವರು ರಾಜೀನಾಮೆ ಬೆದರಿಕೆ ಹಾಕಿದ ನಂತರ ಅವರು ಪ್ರತಿನಿಧಿಸುವ ತಾಲ್ಲೂಕುಗಳನ್ನು ಬರಪಟ್ಟಿಗೆ ಸೇರಿಸಲಾಗಿದೆ. ಸರ್ಕಾರದ ವಿರುದ್ಧ ಆಡಳಿತ ಪಕ್ಷದ ಶಾಸಕರೇ ತಿರುಗಿ ಬಿದ್ದಿದ್ದಾರೆಂದು ಟೀಕಿಸಿದರು.

ಜಿಲ್ಲೆಗೆ ಬರ ಹಾಗು ಭೂ ಸಂತ್ರಸ್ತರಿಗೆ ಪರಿಹಾರ ಬಿಡುಗಡೆ ಮಾಡಬೇಕು. ಹಾಗೆಯೇ ಬೆಳೆ ಕಳೆದುಕೊಂಡ ರೈತರಿಗೂ ನೆರವು ನೀಡಬೇಕು. ರೈತರ ಸಾಲ ಮನ್ನಾ ಮಾಡಬೇಕು. ಕಸ್ತೂರಿ ರಂಗನ್ ವರದಿ ಜಾರಿ ವಿಚಾರದಲ್ಲಿ ರಾಜ್ಯ ಸರ್ಕಾರ ಕೈಗೊಂಡಿರುವ ಒಮ್ಮತದ ನಿರ್ಣಯವನ್ನು ಸ್ವಾಗತಿಸಿದರು. ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಎಸ್.ದ್ಯಾವೇಗೌಡ, ಜಿಲ್ಲಾ ವಕ್ತಾರ ಹೊಂಗೆರೆ ರಘು ಇತರರು ಇದ್ದರು.

### ಮುಖ್ಯಮಂತ್ರಿ ಸ್ಪಷ್ಟನೆ ನೀಡಲಿ

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಭ್ರಷ್ಟಾಚಾರದ ವಿರುದ್ಧ ಮಾತನಾಡಿದ್ದರೆ, ಅವರ ಸಂಪುಟದ ಸದಸ್ಯರಾದ ಕೆ.ಎಂ.ಶಿವಲಿಂಗೇಗೌಡ ಅವರು ಗೌರವಯುತವಾಗಿ ಲಂಚ ಕೊಡಬೇಕೆಂದು ಕುಮ್ಮಕ್ಕು ನೀಡುವ ರೀತಿ ಮಾತನಾಡಿರುವುದು ಖಂಡನೀಯ. ಈ ಮೂಲಕ ಯಾವುದೇ ಕೆಲಸ ಮಾಡಿಕೊಳ್ಳಬೇಕಾದರೆ ಲಂಚ ಕೊಡಬೇಕೆಂದು ನೇರವಾಗಿ ಹೇಳಿದ್ದಾರೆ. ಈ ಬಗ್ಗೆ ಮುಖ್ಯಮಂತ್ರಿ ಸ್ಪಷ್ಟನೆ ನೀಡಬೇಕೆಂದು ಹೆಚ್.ಕೆ.ಕುಮಾರಸ್ವಾಮಿ ಅವರು ಒತ್ತಾಯಿಸಿದರು.

# ಸೆ.27ರಂದು ರಾಜ್ಯಮಟ್ಟದ ವೈಚಾರಿಕ ಸಂವಾದ ಸಮಾವೇಶ

• ಪ್ರಜೋದಯ ವರದಿ




**ಹಾಸನ:** ಭಗತ್ ಸಿಂಗ್ ಜನ್ಮದಿನದ ಅಂಗವಾಗಿ ನಾನೇಕೆ ನಾಸ್ತಿಕ ಎಂಬ ಆಶಯದೊಂದಿಗೆ 3ನೇ ರಾಜ್ಯಮಟ್ಟದ ವೈಚಾರಿಕ ಸಂವಾದ ಸಮಾವೇಶವನ್ನು ಸೆ.27ರಂದು ನಗರದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಿಐಟಿಯು ಜಿಲ್ಲಾಧ್ಯಕ್ಷ ಧರ್ಮೇಶ್ ಅವರು ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮಾವೇಶವನ್ನು ಪ್ರೊ.ರಾಜಪ್ಪ ದಳವಾಯಿ ಅವರು ಉದ್ಘಾಟಿಸಲಿದ್ದಾರೆ. ಅಖಿಲ ಭಾರತ ವಿಚಾರವಾದಿಗಳ ಒಕ್ಕೂಟದ ಅಧ್ಯಕ್ಷ ನರೇಂದ್ರ ನಾಯಕ್ ಅವರು ಕಾರ್ಯ ಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಭಾರತದ ಮರೆಮಾಚಿದ ನಾಸ್ತಿಕತೆ ಇತಿಹಾಸ ಎಂಬ ಪುಸ್ತಕವನ್ನು ಬಿಡುಗಡೆ ಮಾಡಲಾಗು ವುದು. ಜೊತೆಗೆ ನಾಸ್ತಿಕತೆ ಎಂದರೇನು, ಭಾರತದಲ್ಲಿ ನಾಸ್ತಿಕ ತೆಯ ಇತಿಹಾಸ ಸೇರಿ ಹಲವು ವಿಷಯಗಳ ಕುರಿತು ವಿಚಾರ ಗೋಷ್ಠಿ ಹಾಗು ಸಂವಾದಗಳು ನಡೆಯಲಿವೆಂದು ತಿಳಿಸಿದರು.

ವೈದ್ಯರು, ಮನೋವೈದ್ಯರು ಹಾಗು ವಿವಿಧ ಕ್ಷೇತ್ರಗಳ ತಜ್ಞರೊಂದಿಗೆ ವಿದ್ಯಾರ್ಥಿ-ಯುವಜನರ ಸಂವಾದಕ್ಕೂ ಅವಕಾಶ ಕಲ್ಪಿಸಲಾಗಿದೆ. ಭಾರತದಲ್ಲಿ ನಾಸ್ತಿಕತೆಯ ಚಿಂತನೆಯ ಐತಿಹಾಸಿಕ ಬೆಳವಣಿಗೆಯ ಕುರಿತು ಡಾ.ಬಿ.ಆರ್. ಮಂಜುನಾಥ್ ಅವರು ವಿಶೇಷ ಉಪನ್ಯಾಸ ಮತ್ತು ಸಂವಾದ ನಡೆಸಿಕೊಡಲಿದ್ದಾರೆಂದು ತಿಳಿಸಿದರು.

ವಿದ್ಯಾರ್ಥಿ-ಯುವಜನರಲ್ಲಿ ಭಗತ್ ಸಿಂಗ್ ಅವರ ವಿಚಾರಧಾರೆ ಹಾಗು ವೈಚಾರಿಕ ಚಿಂತನೆಗಳನ್ನು ಪರಿಚಯಿಸುವ ಉದ್ದೇಶದಿಂದ ಈಗಾಗಲೇ ಪದವಿ ವಿದ್ಯಾರ್ಥಿಗಳಿಗೆ ಪ್ರಬಂಧ ಮತ್ತು ಭಾಷಣ ಸ್ಪರ್ಧೆಗಳನ್ನು ನಡೆಸಲಾಗಿದೆ. ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಸಮಾವೇಶದ ಸಂದರ್ಭದಲ್ಲಿ ಬಹುಮಾನ ಮತ್ತು ಪ್ರವಾಣಪತ್ರ ವಿತರಿಸಲಾಗುವುದೆಂದು ತಿಳಿಸಿದರು.

ಎಐಟಿಯುಸಿ ಜಿಲ್ಲಾ ಅಧ್ಯಕ್ಷ ಎಂ.ಸಿ. ಡೋಂಗ್ರೆ, ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೆಚ್.ಆರ್. ನವೀನ್ ಕುಮಾರ್, ಬಿಜಿವಿಎಸ್ ಜಿಲ್ಲಾ ಕಾರ್ಯದರ್ಶಿ ಚಿನ್ನೇನಹಳ್ಳಿ ಸ್ವಾಮಿ, ಡಿವೈಎಫ್‌ಐ ಜಿಲ್ಲಾ ಸಂಚಾಲಕ ಪೃಥ್ವಿ, ಮಾದಿಗ ದಂಡೋರ ರಾಜ್ಯ ಪ್ರಧಾನ ಕಾರ್ಯದರ್ಶಿ ಟಿ.ಆರ್. ವಿಜಯಕುಮಾರ್, ಎಸ್‌ಎಫ್‌ಐ ಜಿಲ್ಲಾ ಕಾರ್ಯದರ್ಶಿ ರಮೇಶ್ ಇದ್ದರು.

# ಸಚಿವ ಸ್ಥಾನದಿಂದ ಶಿವಲಿಂಗೇಗೌಡ ವಜಾಗೊಳಿಸಿ

## ಅರಸೀಕೆರೆ ನಗರಸಭೆ ಮಾಜಿ ಅಧ್ಯಕ್ಷ ಗಿರೀಶ್ ಒತ್ತಾಯ

• ಪ್ರಜೋದಯ ವರದಿ

**ಹಾಸನ:** ಭ್ರಷ್ಟಾಚಾರಕ್ಕೆ ಕುಮ್ಮಕ್ಕು ನೀಡುವ ರೀತಿಯಲ್ಲಿ ಬಹಿರಂಗವಾಗಿ ಮಾತನಾಡಿರುವ ಸಚಿವ ಕೆ.ಎಂ.ಶಿವಲಿಂಗೇಗೌಡ ಅವರನ್ನು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸಚಿವ ಸ್ಥಾನದಿಂದ ವಜಾಗೊಳಿಸಬೇಕೆಂದು ಅರಸೀಕೆರೆ ನಗರಸಭೆ ಮಾಜಿ ಅಧ್ಯಕ್ಷ ಗಿರೀಶ್ ಅವರು ಒತ್ತಾಯಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಸಂದರ್ಭದಲ್ಲಿ ಲಂಚ ಕೇಳಿದರೆ ನನಗೆ ದೂರು ನೀಡಿ ಎಂದಿದ್ದರು. ಆದರೀಗ ಅವರ ಸಚಿವರು ಲಂಚ ಕೊಡಿ ಎಂದು ತದ್ವಿರುದ್ಧ ಹೇಳಿಕೆ ನೀಡಿದ್ದಾರೆ. ಹೀಗಾಗಿ ಮಂತ್ರಿಸ್ಥಾನದಲ್ಲಿ ಮುಂದುವರಿಯುವ ನೈತಿಕತೆ ಕಳೆದುಕೊಂಡಿದ್ದಾರೆ. ಸರ್ಕಾರಕ್ಕೆ ಮುಜುಗರ ತರುವ ರೀತಿ ಮಾತನಾಡಿರುವ ಸಚಿವರನ್ನು ವಜಾ ಮಾಡಬೇಕು ಎಂದು ಆಗ್ರಹಿಸಿದರು.

ಶಿವಲಿಂಗೇಗೌಡ ಅವರು ಕಳೆದ 18 ವರ್ಷದಿಂದಲೂ ಇದೇ ರೀತಿ ಅರಸೀಕೆರೆ ಜನರಿಗೆ ಮಂಕುಬೂದಿ ಎರಚುತ್ತಾ ಗೆದ್ದು ಬಂದಿದ್ದಾರೆ. ಇದೀಗ ಲಂಚ ಕೊಟ್ಟು ಕೆಲಸ ಮಾಡಿಸಿಕೊಳ್ಳಿ ಎಂದು ಹೇಳಿಕೆ ನೀಡಿರುವ ಸಚಿವರ ನಡೆಗೆ ಅದೇ ಅರಸೀಕೆರೆ ಜನತೆ ಪಶ್ಚಾತ್ತಾಪ ಪಡುತ್ತಿದ್ದಾರೆ. 60 ವರ್ಷ ತುಂಬಿದ ಮೇಲೆ ಅರಳು ಮರುಳು ಅನ್ನೋ ಹಾಗೆ, ಮುಂದಾದರೂ ಕ್ಷೇತ್ರದ ಮತದಾರರು ಉತ್ತಮ ವ್ಯಕ್ತಿಯನ್ನು ಆಯ್ಕೆ ಮಾಡಿ ಎಂದು ಮನವಿ ಮಾಡಿದರು.




ಸಕಲೇಶಪುರದಲ್ಲಿ ಸಚಿವರನ್ನು ಪ್ರಶ್ನೆ ಮಾಡಿದ ವಿನೋದ್ ಎಂಬುವ ವರು ಕಾಂಗ್ರೆಸ್ ಕಾರ್ಮಿಕರ ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿದ್ದಾರೆ. ಸಚಿವರಿಗೆ ಅವರ ಬಗ್ಗೆ ಗೊತ್ತಿಲ್ಲ. ಅವರ ಕುಮ್ಮಕ್ಕಿನಿಂದಲೇ ಅರಸೀಕೆರೆಯ 34 ಇಲಾಖೆಯಲ್ಲೂ ಭ್ರಷ್ಟಾಚಾರ ನಡೆಯುತ್ತಿದೆ. ಶಾಲೆಗೆ ಟಿವಿ ಖರೀದಿಯಲ್ಲಿ 78 ಲಕ್ಷ ರೂ. ಹಗರಣ ನಡೆದಿದೆ. 17 ಸಾವಿರದ ಟಿವಿಗೆ 58 ಸಾವಿರ ರೂ. ನೀಡಲಾಗಿದೆ. ಸಣ್ಣ ಕಾರಣಕ್ಕೆ ರಾಜಣ್ಣ ಅವರನ್ನು ವಜಾ ಮಾಡಿದಂತೆ ಶಿವಲಿಂಗೇಗೌಡ ಅವರನ್ನೂ ಸಂಪುಟದಿಂದ ಕೈ ಬಿಡಿ, ಇಲ್ಲದಿದ್ದರೆ ಹೋರಾಟ ತೀವ್ರ ಗೊಳಿಸುವ ಎಚ್ಚರಿಕೆ ನೀಡಿದರು. ನಗರ ಸಭೆ ಮಾಜಿ ಸದಸ್ಯ ಹರ್ಷವರ್ಧನ್ ಇದ್ದರು.

### ಮಹದೇವಪ್ಪ ನಿಧನ



ಅರಸೀಕೆರೆ: ಶ್ರೀನಗರ ಬಡಾವಣೆ ನಿವಾಸಿ ಹಾಗು ನಿವೃತ್ತ ಶಿಕ್ಷಕ ಬಿ.ಮಹದೇವಪ್ಪ (81) ಬುಧವಾರ ನಿಧನರಾದರು. ಪುತ್ರ ಹಾಗು ಮೂವರು ಪುತ್ರಿಯರನ್ನು ಅಗಲಿದ್ದಾರೆ. ಸ್ವಗ್ರಾಮ ಉದ್ದೇಬೋರನಹಳ್ಳಿಯಲ್ಲಿ ವೀರಶೈವ ಲಿಂಗಾಯತ ಸಂಪ್ರದಾಯದಂತೆ ಸಂಜೆ ಅಂತ್ಯಕ್ರಿಯೆ ನಡೆಯಿತು. ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲ್ಲೂಕು ಘಟಕ ಸೇರಿ ಶಿಕ್ಷಕ ಸಮುದಾಯ ಸಂತಾಪ ಸೂಚಿಸಿದೆ.

# ಹಾಸನಾಂಬ ಜಾತ್ರೆ: ಜವಾಬ್ದಾರಿಯುತವಾಗಿ ಕರ್ತವ್ಯ ನಿರ್ವಹಿಸಿ



• ಪ್ರಜೋದಯ ವರದಿ

**ಹಾಸನ:** ಹಾಸನಾಂಬ ಜಾತ್ರಾ ಮಹೋತ್ಸವದಲ್ಲಿ ತಪ್ಪುಗಳಿಗೆ ಅವಕಾಶವಿಲ್ಲದಂತೆ ನಿಗಾವಹಿಸಿ ಜವಾಬ್ದಾರಿಯುತವಾಗಿ ಕರ್ತವ್ಯ ನಿರ್ವಹಿಸುವಂತೆ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬುಧವಾರ ಶ್ರೀ ಹಾಸನಾಂಬ ದೇವಿ ಹಾಗೂ ಶ್ರೀ ಸಿದ್ದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ ಕುರಿತು ಸಭೆ ನಡೆಸಿ ಮಾತನಾಡಿದ ಅವರು, ಕಳೆದ ಬಾರಿ ಆಗಿರುವ ಲೋಪಗಳನ್ನು ಗುರುತಿಸಿ ಸರಿಪಡಿಸಿಕೊಂಡು ಶಿಸ್ತುಬದ್ಧವಾಗಿ ಕೆಲಸ ಮಾಡ ಬೇಕೆಂದು ತಿಳಿಸಿದರು.

ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದರಲ್ಲದೆ, ಎಲ್ಲಾ ತಂಡಗಳು ಗೊಂದಲಕ್ಕೆ ಆಸ್ಪದ ನೀಡದೆ ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡಬೇಕು. ಜಾತ್ರಾ ಮಹೋತ್ಸವಕ್ಕೆ ಸಂಬಂಧಿಸಿ ದಂತೆ ರಚಿಸಿರುವ ಎಲ್ಲಾ ತಂಡಗಳು ಸೆ.24 ರಂದು ನಡೆಯುವ ಸಭೆಯಲ್ಲಿ ಭಾಗವಹಿಸುವಂತೆ ಸೂಚನೆ ನೀಡಿದರು.

ಅಪರ ಜಿಲ್ಲಾಧಿಕಾರಿ ಕೃಷ್ಣಮೂರ್ತಿ, ಉಪವಿಭಾಗಾಧಿಕಾರಿ ಹಾಗೂ ದೇವಾಲಯದ ಆಡಳಿತಾಧಿಕಾರಿ ಜಗದೀಶ್ ಗಂಗಣ್ಣನವರ್ ಹಾಗೂ ಜಿಲ್ಲಾ ಮಟ್ಟದ ವಿವಿಧ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.

# ಹಣದ ವಿಚಾರಕ್ಕೆ ವ್ಯಕ್ತಿ ಮೇಲೆ ಮಾರಣಾಂತಿಕ ಹಲ್ಲೆ



» ಮೊದಲನೇ ಪುಟದಿಂದ

ಅವಧಿಗೆ ಚಂದ್ರೇಗೌಡ ತಮ್ಮ 1 ಎಕರೆ ಭೂಮಿಯನ್ನು 75 ಸಾವಿರ ರೂ.ಗೆ ನೀಡಿದ್ದರು. ಆರೋಪಿಗಳಿಬ್ಬರೂ ತೋಟದಲ್ಲಿ ಕೆಲಸ ಮಾಡುತ್ತಿದ್ದಾಗ ಚಂದ್ರೇಗೌಡ ತೆರಳಿ ಹಣ ನೀಡುವಂತೆ ಕೇಳಿದ್ದಾರೆ. ಈ ವಿಚಾರವಾಗಿ ಪರಸ್ಪರ ಗಲಾಟೆ ನಡೆದು ಪರಿಸ್ಥಿತಿ ವಿಕೋಪಕ್ಕೆ ತಿರುಗಿದೆ. ಜಗಳ ತಾರಕಕ್ಕೇರುತ್ತಿದ್ದಂತೆ ಚಂದ್ರೇಗೌಡ ಅವರ ಸಹೋದರ ಕುಮಾರ್ ಜಗಳ ಬಿಡಿಸಲು ಜನರನ್ನು ಕರೆತರಲು ಊರಿಗೆ ಬಂದಿದ್ದಾರೆ. ವಾಪಾಸ್ ಹೋಗುವಷ್ಟರಲ್ಲಿ ಪಿಕಾಸಿಯಿಂದ ಹಲ್ಲೆ ನಡೆಸಿದ್ದಾರೆ. ತಲೆ ಹಾಗು ಮುಖಕ್ಕೆ ಬಲವಾಗಿ ಹೊಡೆದಿದ್ದರಿಂದ ಚಂದ್ರೇಗೌಡ ಅವರು ಅಸ್ವಸ್ಥರಾಗಿ ಬಿದ್ದಿದ್ದರೆಂದು ತಿಳಿದುಬಂದಿದೆ.

ಖಾಸಗಿ ವಾಹನದಲ್ಲಿ ಅವರನ್ನು ಆಸ್ಪತ್ರೆಗೆ ಕರೆತರಲಾಯಿತು. ಗ್ರಾಮೀಣ ಠಾಣೆ ಪೊಲೀಸರು ಗಾಯಾಳು ಚಂದ್ರೇಗೌಡರ ಹೇಳಿಕೆ ಪಡೆದಿದ್ದು, ಮುಂದಿನ ಕ್ರಮ ಕೈಗೊಂಡಿದ್ದಾರೆ.

# ಏಷ್ಯನ್ ಕ್ರೀಡಾಕೂಟ: ಮನು ಭಾಕರ್‌ಗೆ ಐದನೇ ಸ್ಥಾನ

• ಪ್ರಜೋದಯ ವರದಿ



**ನಾಗೋಯಾ:** ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಎರಡು ಪದಕ ಜಯಿಸಿದ್ದ ಮನು ಭಾಕರ್ ಅವರು ಏಷ್ಯನ್ ಕ್ರೀಡಾಕೂಟದಲ್ಲಿ ಬುಧವಾರ ನಡೆದ ಮಹಿಳೆಯರ 10 ಮೀ ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಐದನೇ ಸ್ಥಾನ ಪಡೆದರು. ಅಲ್ಪ ಅಂತರ ದಲ್ಲಿ ಕಂಚಿನ ಪದಕ ತಪ್ಪಿಸಿಕೊಂಡರು.

ಮನು ಅವರು ಫೈನಲ್‌ನಲ್ಲಿ 181.1 ಅಂಕ ಗಳಿಸಿದರು. ಅರ್ಹತಾ ಸುತ್ತಿನಲ್ಲಿ ಒಟ್ಟು 579 ಅಂಕ ಗಳಿಸಿ ಫೈನಲ್ ಪ್ರವೇಶಿಸಿದ್ದರು. 24 ವರ್ಷದ ಮನು ಅವರು 25 ಮೀ ಪಿಸ್ತೂಲ್ ವಿಭಾಗದಲ್ಲಿ ಸ್ಪರ್ಧಿಸುವರು. ಹೋದ ಸಲ ಅವರು ಈ ವಿಭಾಗದಲ್ಲಿ ಚಾಂಪಿಯನ್ ಆಗಿದ್ದರು. ಭಾರತದ ಈಶಾ ಸಿಂಗ್ ಅವರು 572 ಅಂಕ ಗಳಿಸಿ 15ನೇ ಸ್ಥಾನ ಪಡೆದರು. ಸುರುಚಿ ಸಿಂಗ್ ಅವರು 568 ಅಂಕಗಳೊಂದಿಗೆ 26ನೇ ಸ್ಥಾನ ಪಡೆದರು.

# ಕರ್ತವ್ಯ ಲೋಪ: ಭೂಮಾಪಕ ಅಮಾನತು

» ಮೊದಲನೇ ಪುಟದಿಂದ

ರುವುದು ಮೇಲ್ನೋಟಕ್ಕೆ ಕಂಡುಬಂದಿದೆ ಎಂದು ಅಮಾನತು ಆದೇಶದಲ್ಲಿ ತಿಳಿಸಲಾಗಿದೆ. ಸರ್ಕಾರಿ ನೌಕರರ ನಡತೆ ನಿಯಮಗಳ ಉಲ್ಲಂಘನೆ ಆರೋಪದ ಹಿನ್ನಲೆಯಲ್ಲಿ ಶಿಸ್ತು ಪ್ರಕರಣವನ್ನು ಕಾಯ್ದಿರಿಸಿ, ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ-1957ರ ನಿಯಮ 10(1)(ಡಿ) ಅಡಿಯಲ್ಲಿ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತಿನಲ್ಲಿರಿಸಲಾಗಿದೆ.

ಅಮಾನತುಗೊಂಡ ನೌಕರರ ಹುದ್ದೆಯ ಮೇಲಿನ ಹಕ್ಕನ್ನು ಬೇಲೂರು ತಾಲ್ಲೂಕು ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಚೇರಿಗೆ ಸ್ಥಳಾಂತರಿಸಲಾಗಿದೆ. ಅಮಾನತು ಅವಧಿಯಲ್ಲಿ ನಿಯಮಾನುಸಾರ ಜೀವನಾಧಾರ ಭತ್ಯೆ ಪಾವತಿಸಲು ಹಾಗು ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಪಡೆಯದೆ ಕೇಂದ್ರ ಸ್ಥಾನ ಬಿಡದಂತೆ ಆದೇಶದಲ್ಲಿ ಸೂಚಿಸಲಾಗಿದೆ.

# ವಿಜೃಂಭಣೆಯ ವೀರಭದ್ರೇಶ್ವರ ಜಯಂತ್ಯೋತ್ಸವ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ಪಟ್ಟಣದ ಕುಂಬಾರ ಬೀದಿಯ ಶ್ರೀ ವೀರಭದ್ರೇಶ್ವರ ಯುವಕರ ಬಳಗದ ವತಿಯಿಂದ 7ನೇ ವರ್ಷದ ಶ್ರೀ ವೀರಭದ್ರೇಶ್ವರ ಜಯಂತೋತ್ಸವವನ್ನು ಸೆ.21 ಮತ್ತು 22ರಂದು ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಅದ್ದೂರಿಯಾಗಿ ಆಚರಿಸಲಾಯಿತು.

ಸೋಮೆಕಟ್ಟೆ ಕಾಡಸಿದ್ದೇಶ್ವರ ಮಠ, ನೊಣವಿನಕೆರೆಯ ಶ್ರೀ ಶ್ರೀ ಡಾ.ಕರಿವೃಷಭ ದೇಸಿಕೇಂದ್ರ, ಶಿವಯೋಗೇಶ್ವರ ಮಹಾಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ಕಾರ್ಯಕ್ರಮಗಳು ಜರುಗಿದವು.

ಸೆ.21ರಂದು ಸಂಜೆ ಸುಮಂಗಲಿಯರಿಂದ ಗಂಗಾ ಕಳಸ ತರಲಾಯಿತು. ಬಳಿಕ ಶ್ರೀ ವೀರಭದ್ರೇಶ್ವರ ಸ್ವಾಮಿಗೆ ರುದ್ರಾಭಿಷೇಕ, ಮಹಾಮಂಗಳಾರತಿ ಹಾಗೂ ಪ್ರಸಾದ ವಿನಿಯೋಗ ನಡೆಯಿತು. ಪುರದಮ್ಮನವರ ಶ್ರೀ ವೀರಭದ್ರಸ್ವಾಮಿ ಮತ್ತು ಶ್ರೀ ದೂತರಾಯಸ್ವಾಮಿಯವರಿಗೆ ವಿಶೇಷ ಮಣಿವು ಸೇವೆ ನೆರವೇರಿಸಲಾಯಿತು.

ಸೆ.22ರಂದು ಬ್ರಾಹ್ಮಿ ಮುಹೂರ್ತದಲ್ಲಿ ಗಣಹೋಮ, ರುದ್ರಹೋಮ ಹಾಗೂ ದುರ್ಗಾ ಹೋಮ ನೆರವೇರಿತು. ಬೆಳಿಗ್ಗೆ 11 ಗಂಟೆಗೆ ಮಹಾಪೂರ್ಣಾಹುತಿ, ವಿಶೇಷ ಪುಷ್ಪಾಲಂಕಾರ, ಮಂಗಳಾರತಿ ಹಾಗೂ ನೈವೇದ್ಯ ಸಮರ್ಪಿಸಲಾಯಿತು. ನಂತರ ಭಕ್ತರಿಗೆ ಪ್ರಸಾದ ವಿತರಿಸಲಾಯಿತು.

ಶ್ರೀ ರೇಣುಕಾ ಭಜನಾ ಮಂಡಳಿಯವರಿಂದ ಭಜನಾ ಕಾರ್ಯಕ್ರಮ ನಡೆಯಿತು. ಸಂಜೆ ವೀರಗಾಸೆ, ಭದ್ರಕಾಳಿ ಕುಣಿತ, ಅಘೋರಿ ಕುಣಿತ ಹಾಗೂ ಕರಡೆ ವಾದ್ಯ ಸೇರಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ಜಯಂತೋತ್ಸವದ ಅಂಗವಾಗಿ ನಗರದ ಪ್ರಮುಖ ಬೀದಿಗಳಲ್ಲಿ ಬೆಳ್ಳಿ ರಥದಲ್ಲಿ ಶ್ರೀ ವೀರಭದ್ರಸ್ವಾಮಿಯವರ ವೈಭವದ ಉತ್ಸವ ಮೆರವಣಿಗೆ ನಡೆಯಿತು. ಮೆರವಣಿಗೆಯಲ್ಲಿ ಭಕ್ತರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಭಕ್ತರ ಗಮನ ಸೆಳೆದವು.

# ಯುವಕರು ದುಶ್ಚಟದಿಂದ ದೂರವಿರಬೇಕು

• ಪ್ರಜೋದಯ ವರದಿ

**ಹೊಳೆನರಸೀಪುರ:** ಯುವಕರು ವಿದ್ಯಾಭ್ಯಾಸದ ಅವಧಿಯಲ್ಲಿ ದುಶ್ಚಟಕ್ಕೆ ಒಳಗಾಗದೆ ಸಮಾಜದಲ್ಲಿ ಉತ್ತಮ ವ್ಯಕ್ತಿಗಳಾಗಿ ಬೆಳೆಯಬೇಕೆಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಜಿ.ಜಿ. ರಾಜಶೇಖರ್ ಅವರು ಹೇಳಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಎನ್‌ಸಿಸಿ ಘಟಕ ಹಾಗು ರೋಟರಿ ಕ್ಲಬ್ ಆಫ್ ಹಾಸನ ರಾಯಲ್ ವತಿಯಿಂದ ಬುಧವಾರ ನಶಾ ಮುಕ್ತ ಅಭಿಯಾನದ ಅಂಗವಾಗಿ ನಡೆದ ಕಿರು ನಾಟಕಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ನಶಾ ಮುಕ್ತ ಯುವ ಎಂಬ ಘೋಷಣೆಯೊಂದಿಗೆ ದೇಶದಲ್ಲಿ ಯುವಕರಿಗೆ ಜಾಗೃತಿ ಮೂಡಿಸುವ ಕಾರ್ಯ ಕ್ರಮ ಜಾರಿಗೆ ತಂದಿದೆ. ಯುವಕರು ಮದ್ಯಪಾನ, ಧೂಮಪಾನ, ಡ್ರಗ್ಸ್ ಸೇರಿ ನಶಾ ಪದಾರ್ಥಗಳನ್ನು ಸೇವಿಸದೆ ತಮ್ಮ ಪೋಷಕರಿಗೆ ಹಾಗು ಸಮಾಜಕ್ಕೆ ಒಳ್ಳೆಯ ವ್ಯಕ್ತಿಗಳಾಗಬೇಕು. ಇಂದು ಸಣ್ಣ ಮಕ್ಕಳೇ ಇಂತಹ ದುಶ್ಚಟಗಳಿಗೆ ದಾಸರಾಗುತ್ತಿರುವುದು ಆಘಾತಕಾರಿ ವಿಷಯ.




ಅದರಿಂದಾಗಿ ತಮ್ಮ ಆರೋಗ್ಯ ಹಾಳು ಮಾಡಿಕೊಳ್ಳುವದರ ಜೊತೆಗೆ ಅನೇಕರು ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿ ಭವಿಷ್ಯ ಹಾಳು ಮಾಡಿಕೊಳ್ಳುತ್ತಿದ್ದಾರೆಂದರು.

ಎನ್‌ಸಿಸಿ ಘಟಕದ ಅಧಿಕಾರಿ ಡಾ. ಹೆಚ್.ಎನ್.ಹರೀಶ್ ಅವರು ಮಾತನಾಡಿ, ನಶಾ ಪದಾರ್ಥಗಳು ಚಿಕ್ಕ ಮಕ್ಕಳಿಗೆ ಸುಲಭವಾಗಿ ಸಿಗುತ್ತಿರುವುದು ಆಶ್ಚರ್ಯಕರ ಸಂಗತಿ. ದೇಶವನ್ನು ಮುನ್ನಡೆಸಬೇಕಾದ ಯುವ ಸಮುದಾಯ ಇಂದು ಇಂತಹ ಮಾದಕ ವಸ್ತುಗಳ ವ್ಯಸನಕ್ಕೆ ದಿನೆ ದಿನೇ ಒಳಗಾಗುತ್ತಿರುವುದು ಸಮಾಜದ ಮೇಲೆ ದುಷ್ಪರಿಣಾಮ ಬೀರುತ್ತದೆ. ಹಳ್ಳಿ, ಪಟ್ಟಣ ಎಲ್ಲಾ ಭಾಗದಲ್ಲೂ ಯುವಕರು ಹಾದಿ ತಪ್ಪುತ್ತಿದ್ದಾರೆ. ಡ್ರಗ್ ಎಂಬ ವಿಷಕಾರಿ ಪದಾರ್ಥ ಎಲ್ಲೆಂದರಲ್ಲಿ ದೊರೆಯುತ್ತಿದ್ದು, ಯುವಕರು ಕ್ಷಣಿಕ ಸುಖಕ್ಕೆ ಜೀವನ ಹಾಳು ಮಾಡಿಕೊಳ್ಳುತ್ತಿದ್ದಾರೆ. ಪೋಷಕರು ತಮ್ಮ ಮಕ್ಕಳನ್ನು ಜಾಗೃತಿಯಿಂದ ಬೆಳೆಸಬೇಕಾದ ಅನಿವಾರ್ಯ ಪರಿಸ್ಥಿತಿ ಬಂದಿದ್ದು, ಮಕ್ಕಳಿಗೆ ಸಂಸ್ಕಾರ ನೀಡುವ ಮೂಲಕ ಸಮಾಜದಲ್ಲಿ ಉತ್ತಮ ವ್ಯಕ್ತಿಗಳನ್ನಾಗಿ ರೂಪಿಸಬೇಕೆಂದರು.

ಕಾಲೇಜಿನ ಎನ್‌ಸಿಸಿ ಘಟಕದ ವಿದ್ಯಾರ್ಥಿಗಳು ನಶಾ ಮುಕ್ತ ಸಮಾಜ ನಿರ್ಮಾಣದ ಸಂದೇಶ ಸಾರುವ ಕಿರು ನಾಟಕ ಪ್ರದರ್ಶಿಸಿದರು. ಹಾಗೆಯೇ ನಶಾ ಮುಕ್ತ ಅಭಿಯಾನದ ಕರಪತ್ರ ಪ್ರದರ್ಶಿಸಿದರು. ಇದೇ ವೇಳೆ ನಶಾ ಮುಕ್ತ ಮಾಡುವ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಕಾಲೇಜಿನ ಅಧ್ಯಾಪಕರು ಹಾಗು ವಿದ್ಯಾರ್ಥಿಗಳು ಹಾಜರಿದ್ದರು.

# ಪುರಸಭೆ ಅಧ್ಯಕ್ಷರ ಅವಧಿ ಕಡಿತ: ತುರ್ತು ಸಭೆ

» ಮೊದಲನೇ ಪುಟದಿಂದ

ಈ ಕುರಿತು ಜಿಲ್ಲಾಧಿಕಾರಿಗೆ ಮೊದಲು ಮನವಿ ಸಲ್ಲಿಸಿ, ಅವರ ನಿರ್ಧಾರದ ಬಳಿಕ ಅಗತ್ಯವಿದ್ದರೆ ನ್ಯಾಯಾಲಯದ ಮೊರೆ ಹೋಗುವ ಬಗ್ಗೆ ಸಭೆಯಲ್ಲಿ ನಿರ್ಧರಿಸಲಾ ಯಿತು. ಸಭೆಯಲ್ಲಿ 17 ಸದಸ್ಯರು ಒಮ್ಮತದ ಅಭಿಪ್ರಾಯ ವ್ಯಕ್ತಪಡಿಸಿದರು.

ಸದಸ್ಯ ಜಮಾಲುದ್ದೀನ್ ಮಾತನಾಡಿ, ಸಂವಿಧಾನಾತ್ಮಕವಾಗಿ ಆಯ್ಕೆಯಾದ ಸದಸ್ಯರ ಅವಧಿ ಚುನಾವಣಾ ದಿನಾಂಕ ದಿಂದಲೋ, ಮೀಸಲಾತಿ ಪ್ರಕಟವಾದ ದಿನದಿಂದಲೋ ಅಥವಾ ಅಧ್ಯಕ್ಷರ ಆಯ್ಕೆಯಾದ ಮೊದಲ ಸಭೆಯಿಂದಲೋ ಆರಂಭವಾಗುತ್ತದೆಯೇ ಎಂಬುದನ್ನು ಮುಖ್ಯಾಧಿಕಾರಿ ಗಳು ಸ್ಪಷ್ಟಪಡಿಸಬೇಕೆಂದು ಒತ್ತಾಯಿಸಿದರು.

ಸದಸ್ಯೆ ತೀರ್ಥಕುಮಾರಿ ಅವರು ಮಾತ ನಾಡಿ,ಅಧ್ಯಕ್ಷರು ಪ್ರಸ್ತಾಪಿಸಿರುವ ವಿಷಯ ಎಲ್ಲಾ 23 ಸದಸ್ಯರಿಗೆ ಸಂಬಂಧಿಸಿದ್ದಾಗಿದ್ದು, ಈ ಹೋರಾ ಟಕ್ಕೆ ಸದಸ್ಯರು ಒಗ್ಗಟ್ಟಿ ನಿಂದ ಸಹಕಾರ ನೀಡಬೇಕು ಎಂದರು. ಸಭೆಯಲ್ಲಿ ಮುಖ್ಯಾಧಿಕಾರಿ ಬಸವರಾಜ್, ಉಪಾಧ್ಯಕ್ಷೆ ಉಷಾ ಸತೀಶ್, ಸದಸ್ಯರಾದ ಬಿ. ಗಿರೀಶ್, ಬಿ.ಸಿ.ಜಗದೀಶ್ ಸೇರಿ ಪುರಸಭಾ ಸದಸ್ಯರು ಉಪಸ್ಥಿತರಿದ್ದರು.




ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK